## ಒಂದಾವರ್ತಿ ಸಾಲ ತೀರುವಳಿ ಯೋಜನೆಯ ನೀತಿ – 2019 (ಓ.ಟಿ.ಎಸ್.–2019)

1. **ಸಿಂಧುತ್ವ:**

1.1 ಕರ್ನಾಟಕ ಸರ್ಕಾರವು ನೀತಿಯನ್ನು ಅನುಮೋದಿಸಿದ ದಿನಾಂಕದಿಂದ ಈ ನೀತಿಯು ಜಾರಿಗೆ ಬರುವುದು ಮತ್ತು ಮುಂದಿನ ಹೊಸ ಒಟಿಎಸ್ ನೀತಿಯು ಜಾರಿಗೆ ಬರುವ ವರೆಗೆ ಚಾಲ್ತಿಯಲ್ಲಿರುವುದು.

2. **ಅರ್ಹತಾ ಮಾನದಂಡಗಳು:**

2.1 ಅರ್ಹತಾ ಮಾನದಂಡಗಳು ಈ ಕೆಳಕಂಡಂತಿವೆ:

a. 31ನೇ ಮಾರ್ಚ್ 2018ರಲ್ಲಿ ಇರುವಂತೆ ಮೆಮೊರಾಂಡಮ್ ರಿಜಿಸ್ಟರ್ ಪ್ರಕರಣವನ್ನೂ ಒಳಗೊಂಡಂತೆ ಅನುಮಾನಾಸ್ಪದ/ನಷ್ಟದ ವರ್ಗವೆಂದು ಪರಿಗಣಿಸಲ್ಪಟ್ಟ ಎನ್‌ಪಿಎ ಸಾಲದ ಖಾತೆಗಳು/ಆಸ್ತಿಗಳನ್ನು ಈ ಆಸ್ತಿಗಳ/ಖಾತೆಗಳ ಸ್ಥಾನಮಾನಗಳು ಒಟಿಎಸ್‌ಗೆ ಅರ್ಜಿ ಸಲ್ಲಿಸುವ ದಿನಾಂಕದಂದು ಕೂಡಾ "ಎನ್‌ಪಿಎ" ಆಗಿ ಮುಂದುವರಿದಿದ್ದಲ್ಲಿ ಇವುಗಳನ್ನು ಒಳಗೊಳ್ಳುವುದು.

b. ಪ್ರವರ್ತಕರಲ್ಲದ, ನಿರ್ದೇಶಕರಲ್ಲದ ಮತ್ತು ಸಂಸ್ಥೆಯ ಲಾಭದಲ್ಲಿ ಭಾಗವನ್ನು ಪಡೆಯದೇ ಇರುವ ಆದರೆ, ಮೂರನೇ ಪಾರ್ಟಿಯವರಾಗಿ ತಮ್ಮ ಸ್ಥಿರ ಆಸ್ತಿಗಳನ್ನು ಪೂರಕ ಭದ್ರತೆಯಾಗಿ ಒಪ್ಪಿಸಿರುವ ಖಾತರಿದಾರರು, ಜಾಮೀನುದಾರರು, ಅವರ ಅರ್ಹತೆಗೆ ಒಳಪಟ್ಟು, ಪ್ರಾಥಮಿಕ ಅಥವಾ ಪೂರಕ ಆಸ್ತಿಗಳು ಲಭ್ಯವಿದ್ದರೂ / ಇಲ್ಲದಿದ್ದರೂ ಕೂಡಾ, ಲಭ್ಯವಿದ್ದಲ್ಲಿ ಅದನ್ನು ಮಾರಾಟ ಮಾಡಿದ್ದರೂ ಅಥವಾ ಮಾರಾಟ ಮಾಡದೇ ಇದ್ದರೂ, ಒಂದುವೇಳೆ ಮಾರಾಟ ಮಾಡಿದ್ದಲ್ಲಿ, ಮಾರಾಟದ ಮೊಬಲಗು ಸಂಪೂರ್ಣವಾಗಿ ನಗದಾಗಿದ್ದರೂ, ನಗದಾಗದಿದ್ದರೂ ಪರಿಗಣಿಸುವುದು.

c. ಯಾವುದೇ ರೀತಿಯ ದಾವೆ(ಗಳು) ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಸಾಲ ವಸೂಲಾತಿ ವಿವಾದ ಪಂಚಾಯತಿ (ಡಿಆರ್‌ಟಿ)/ಎನ್‌ಸಿಎಲ್‌ಟಿಯಲ್ಲಿ ಬಾಕಿ ಇದ್ದಲ್ಲಿ, ಸಮಾಪನೆ ಆದೇಶ ಹೊರಡಿಸಲಾಗಿರುವುದು ಅಥವಾ ಅಫೀಶಿಯಲ್ ಲಿಕ್ವಿಡೇಟರ್‌ರನ್ನು (ಒಎಲ್) ನೇಮಿಸಿದ್ದಲ್ಲಿ, ಅಂತಹ ಸಾಲ ಪಡೆದ ಘಟಕಗಳು ಕೂಡಾ, ಅವರು ಅರ್ಹರಿದ್ದಲ್ಲಿ, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕ್ರಿಯೆ/ದಾವೆಯನ್ನು ಹಿಂದೆ ಪಡೆಯುವುದಾಗಿ ಪ್ರಮಾಣಪತ್ರವನ್ನು ಒಪ್ಪಿಸುವಿಕೆಗೆ ಒಳಪಟ್ಟು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅಂತಹ ಅರ್ಜಿಗಳನ್ನು ಈ ಒಟಿಎಸ್ ನೀತಿಯ ಅಡಿಯಲ್ಲಿ ಇತ್ಯರ್ಥಕ್ಕೆ ಪರಿಗಣಿಸುವಾಗ ಅಂತಹ ಸಾಲ ಪಡೆದ ಘಟಕಗಳು ನ್ಯಾಯಾಲಯದ ವೇದಿಕೆಯಿಂದ ಒಪ್ಪಿಗೆ/ಆದೇಶ/ಅನುಮತಿ ಪತ್ರವನ್ನು ಪಡೆದು ಒಪ್ಪಿಸತಕ್ಕದ್ದು. ಅಲ್ಲದೇ, ಹಿಂಪಡೆಯುವಿಕೆ ಆದೇಶವನ್ನು ಅಥವಾ ಅದು ಇಲ್ಲದ ಪಕ್ಷದಲ್ಲಿ ಕೆಎಸ್‌ಐಐಡಿಸಿಯು ಬೇಬಾಕಿ ಪ್ರಮಾಣಪತ್ರ (ಎನ್‌ಡಿಸಿ) ಹೊರಡಿಸುವ ಮೊದಲು ಇದನ್ನು ಸಲ್ಲಿಸಲು ಒತ್ತಡ ಹಾಕಬಹುದಾಗಿರುತ್ತದೆ. ಒಟಿಎಸ್ ನೀತಿಯ ಅಡಿಯಲ್ಲಿ ಕೆಎಸ್‌ಐಐಡಿಸಿಗೆ ಬರಬೇಕಾಗಿರುವ ಬೇರೆ ಎಲ್ಲಾ ಸಾಲಗಳು ಮತ್ತು ಇತರೆ ಬಾಕಿಗಳ ಪಾವತಿಯನ್ನು ಇತ್ಯರ್ಥ ಮಾಡಿದ ನಂತರ ಕೆಎಸ್‌ಐಐಡಿಸಿಯ ಅನುಕೂಲಕ್ಕೆ ತಕ್ಕಂತೆ ಒಪ್ಪಿಸಲು ಪಟ್ಟು ಹಿಡಿಯಬಹುದಾಗಿರುತ್ತದೆ.

**2.2 ಅನ್ಯತಾ ಅರ್ಹರಿರುವ ಪ್ರಕರಣಗಳಲ್ಲಿ ಈ ಕೆಳಕಂಡವುಗಳು ಒಳಗೊಂಡಿರುತ್ತವೆ:**

ಅ) ಸಮಾಪನಾ ಆದೇಶ ಹೊರಡಿಸಲಾಗಿರುವುದು ಅಥವಾ ಅಫೀಶಿಯಲ್ ಲಿಕ್ವಿಡೇಟರ್‌ರನ್ನು (ಒ.ಎಲ್) ನೇಮಿಸಿದ್ದಲ್ಲಿ ಅಥವಾ ಸಮಾಪನೆಗೆ ಬಿಐಎಫ್‌ಆರ್‌ನವರು ಶಿಫಾರಸ್ಸು ಮಾಡಿದ್ದಲ್ಲಿ;

ಆ) ಎಸ್.ಎಫ್.ಸಿ. ಕಾಯಿದೆಯ ಕಂಡಿಕೆ 29/31ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡ ನಂತರ ಆಸ್ತಿಗಳನ್ನು ಸಂಪೂರ್ಣವಾಗಿ / ಭಾಗಶಃ ಮಾರಾಟ ಮಾಡಿದ್ದಲ್ಲಿ ಅಥವಾ ಮಾರಾಟ ಮಾಡದೇ ಇದ್ದಲ್ಲಿ;

ಇ) ಕೆ.ಎಸ್.ಐ.ಐ.ಡಿ.ಸಿ.ಯು ಸಂಬಂಧಿತ ನ್ಯಾಯಾಲಯದ ಆದೇಶದ ಮೇರೆಗೆ ಪಡೆದ ಮೊಬಲಗಿನ ಮೇಲೆ ಬಡ್ಡಿಯೊಂದಿಗೆ ಅಥವಾ ಬಡ್ಡಿ ರಹಿತವಾಗಿ ಪಡೆದಿದ್ದಲ್ಲಿ ಅಂತಹ ಪ್ರಕರಣಗಳು ಅನ್ಯಥಾ ಅರ್ಹವಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣಿಸಬಹುದಾಗಿರುತ್ತದೆ. ಆದಾಗ್ಯೂ, ಅಂತಹ ಪ್ರಕರಣಗಳಲ್ಲಿ, ಡಿಕ್ರೀ ಆದ ಮೊಬಲಗು ಬಡ್ಡಿಯೊಂದಿಗೆ ಯಾವುದಾದರೂ ಇದ್ದಲ್ಲಿ, ಅಥವಾ ಈ ನೀತಿಯ ಅಡಿಯಲ್ಲಿ ಲೆಕ್ಕಹಾಕಲಾಗಿರುವ ಇತ್ಯರ್ಥ ಮೊಬಲಗನ್ನು ಎರಡೂ ಆಯ್ಕೆಗಳನ್ನು ಅಂದರೆ ಲೆಕ್ಕಹಾಕುವಿಕೆಯ ಮೊದಲು ವಸೂಲಾಗಿರುವ ಸಾಲ/ಒ.ಟಿ.ಎಸ್. ಇತ್ಯರ್ಥ ಮೊಬಲಗಿನ ಶಿಫಾರಸ್ಸು ಎರಡನ್ನೂ ಒಟಿಎಸ್ ಉಪ–ಸಮಿತಿಯು ಪರಿಗಣಿಸಬಹುದಾಗಿರುತ್ತದೆ.

## 2.3 ಅನರ್ಹ ಪ್ರಕರಣಗಳು:

ಸಾಮಾನ್ಯವಾಗಿ ಮೋಸದ ಮತ್ತು ದುರ್ಬಳಕೆ ಪ್ರಕರಣಗಳು ಇತ್ಯರ್ಥಕ್ಕೆ ಅನರ್ಹವಾಗಿರುತ್ತವೆ. ಆದಾಗ್ಯೂ, ವಸೂಲಿಗೆ ಒಟಿಎಸ್ ಉತ್ತಮ ಮಾರ್ಗವೆಂದು ಕಂಡುಬಂದಲ್ಲಿ, ಅಂತಹ ಪ್ರಕರಣಗಳು ಪರಿಗಣನೆಗೆ ಸಮರ್ಥವಾದವು ಎಂದು ಕಂಡುಬಂದಲ್ಲಿ, ವ್ಯವಸ್ಥಾಪಕ ನಿರ್ದೇಶಕರ ಮತ್ತು ಮಂಡಳಿ ಒಪ್ಪಿಗೆಯ ನಂತರ, ಕೆಎಸ್ಐಐಡಿಸಿಯು ಕೈಗೊಂಡಿರುವ/ಕೈಗೊಳ್ಳಲಿರುವ ಯಾವುದೇ ಕ್ರಿಮಿನಲ್ ದಾವೆಗಳ ಪರಿಣಾಮಗಳು/ಫಲಿತಾಂಶಗಳ ಬಗ್ಗೆ ಯಾವುದೇ ಪೂರ್ವಾಗ್ರಹವಿಲ್ಲದೇ ಅಗತ್ಯ ಎಚ್ಚರಿಕೆ ಮತ್ತು ಸೂಕ್ತ ದಂಡವನ್ನು ವಿಧಿಸಿ ಪರಿಗಣಿಸಬಹುದಾಗಿರುತ್ತದೆ. ಅಲ್ಲದೇ, ಸಾಲದ ಸಹಾಯ ಪಡೆದ ಘಟಕಗಳು/ಜಾಮೀನುದಾರರು ತಾವು ಮಾಡಿರುವ ಮೋಸದ ಮತ್ತು ದುರ್ಬಳಕೆಯ ದೆಸೆಯಿಂದ ಆಗಿರಬಹುದಾದ ಯಾವುದೇ ಹೊಣೆಗಾರಿಕೆಗಳಿಂದ ದೋಷಮುಕ್ತರಾಗತಕ್ಕದ್ದಲ್ಲ.

## 3 ಬಾಕಿಗಳ ಇತ್ಯರ್ಥಕ್ಕೆ ತೀರ್ಮಾನ ಸೂತ್ರ:

3.1 ಸಾಲದ ಸಹಾಯ ಪಡೆದ ಘಟಕಗಳು ಈ ಕೆಳಕಂಡ ತೀರ್ಮಾನ ಸೂತ್ರದಂತೆ ಪಾವತಿಸಬೇಕಾಗಿರುವ ಒಟಿಎಸ್ ಮೊಬಲಗನ್ನು ಒಟ್ಟುಗೂಡಿಸಬಹುದಾಗಿದೆ:

| | ಪ್ರವರ್ಗ | ಕನಿಷ್ಟ ಒಟಿಎಸ್ ಮೊಬಲಗು |
|---|---|---|
| ಅ | ಪ್ರಾಥಮಿಕ ಆಸ್ತಿಗಳ ಮೌಲ್ಯವು ಸರಳ ಬಡ್ಡಿಯ ಆಧಾರದ ಮೇಲೆ ಪಾವತಿಸತಕ್ಕ ಮೊಬಲಗಿನ 2 ಪಟ್ಟಿಗಿಂತ ಜಾಸ್ತಿಯಾಗಿದ್ದಲ್ಲಿ. | ಸಾಮಾನ್ಯ ಬಾಕಿಯ ಅಡಿಯಲ್ಲಿ ಸದ್ಯದ ಸಾಲದ ಬಾಕಿ + ಸರಳ ಬಡ್ಡಿಯ ಆಧಾರದ ಮೇಲೆ ಬಡ್ಡಿಯ ಎರಡು ಪಟ್ಟು + ಇತರೆ ಬಾಕಿಗಳು |
| ಆ | ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ನಿವ್ವಳ ಮೌಲ್ಯವು ಸರಳ ಬಡ್ಡಿಯ ಆಧಾರದ ಮೇಲೆ ಪಾವತಿಸತಕ್ಕ ಮೊಬಲಗಿಗಿಂತ ಜಾಸ್ತಿಯಾಗಿದ್ದಲ್ಲಿ | ಸರಳ ಬಡ್ಡಿಯ ಆಧಾರದ ಮೇಲೆ ಪಾವತಿಸತಕ್ಕ ಕನಿಷ್ಟ ಬಾಕಿ + ಇತರೆ ಬಾಕಿಗಳು. |
| ಇ | ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ಮೌಲ್ಯವು ಸರಳ ಬಡ್ಡಿಯ ಆಧಾರದ ಮೇಲೆ ಪಾವತಿಸತಕ್ಕ | ಸಾಲದ ಹಾಲೀ ಬಾಕಿ + ಇತರೆ ಬಾಕಿಗಳು ಅಥವಾ 75% ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ನಿವ್ವಳ ಮೌಲ್ಯ, |

| | | |
|---|---|---|
| | ಮೌಲ್ಯಕ್ಕಿಂತ ಕಡಿಮೆಯಾಗಿದ್ದಲ್ಲಿ, ಆದರೆ ಈಗಿನ ಸಾಲದ ಬಾಕಿಗಿಂತ ಜಾಸ್ತಿಯಾಗಿದ್ದಲ್ಲಿ | ಇವುಗಳಲ್ಲಿ ಯಾವುದು ಜಾಸ್ತಿಯೋ ಅದು. |
| ಈ | ಸುರಕ್ಷಿತ ಆಸ್ತಿಗಳ ಮೌಲ್ಯ + ಖಾಸಗೀ ಆಸ್ತಿಗಳ ನಿವ್ವಳ 50% ಮೌಲ್ಯವು ಈಗಿನ ಸಾಲದ ಬಾಕಿಯ 75% ಮತ್ತು 100%ನ ನಡುವೆ ಇದ್ದಲ್ಲಿ | ಪ್ರಸಕ್ತ ಸಾಲದ ಬಾಕಿಯ 75% + ಇತರ ಬಾಕಿಗಳು ಅಥವಾ 75% ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ನಿವ್ವಳ ಮೌಲ್ಯ, ಇವುಗಳಲ್ಲಿ ಯಾವುದು ಜಾಸ್ತಿಯೋ ಅದು. |
| ಉ | ಸುರಕ್ಷಿತ ಆಸ್ತಿಗಳ ಮೌಲ್ಯ + ಖಾಸಗೀ ಆಸ್ತಿಗಳ ನಿವ್ವಳ ಮೌಲ್ಯದ 50% ಇದು ಈಗಿನ ಸಾಲದ ಬಾಕಿಯ 50% ಮತ್ತು 75%ನ ನಡುವೆ ಇದ್ದಲ್ಲಿ | ಪ್ರಸಕ್ತ ಸಾಲದ ಬಾಕಿಯ 50% + ಇತರ ಬಾಕಿಗಳು ಅಥವಾ 75% ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ನಿವ್ವಳ ಮೌಲ್ಯ, ಇವುಗಳಲ್ಲಿ ಯಾವುದು ಜಾಸ್ತಿಯೋ ಅದು. |
| ಊ | ಸುರಕ್ಷಿತ ಆಸ್ತಿಗಳ ಮೌಲ್ಯ + ಖಾಸಗೀ ಆಸ್ತಿಗಳ ನಿವ್ವಳ 50% ಮೌಲ್ಯವು ಈಗಿನ ಸಾಲದ ಬಾಕಿಯ 50%ಗಿಂತ ಕಡಿಮೆ ಇದ್ದಲ್ಲಿ | ಪ್ರಸಕ್ತ ಸಾಲದ ಬಾಕಿಯ 30% + ಇತರ ಬಾಕಿಗಳು ಅಥವಾ 75% ಸುರಕ್ಷಿತ ಆಸ್ತಿಗಳ ಮೌಲ್ಯ + ವೈಯಕ್ತಿಕ ಆಸ್ತಿಗಳ 50% ನಿವ್ವಳ ಮೌಲ್ಯ, ಇವುಗಳಲ್ಲಿ ಯಾವುದು ಜಾಸ್ತಿಯೋ ಅದು. |
| ಋ | ಅಸಲು ಈಗಾಗಲೇ ಶೂನ್ಯವಾಗಿದ್ದಲ್ಲಿ ಮತ್ತು ಬಡ್ಡಿ ಮಾತ್ರ ಪಾವತಿಸಬೇಕಾಗಿದ್ದಲ್ಲಿ | ಅಂತಹ ಪ್ರಕರಣಗಳಲ್ಲಿ ಮಂಡಳಿಯು ಒಟಿಎಸ್ ಮೊಬಲಗಿನ ಬಗ್ಗೆ ತೀರ್ಮಾನ ಕೈಗೊಳ್ಳುವುದು. |

3.2 ಚಾಲ್ತಿಯಲ್ಲಿರುವ ಅಧಿಕೃತ ನಮೂನೆಯಂತೆ ವಿವರವಾದ ವೈಯಕ್ತಿಕ ಆಸ್ತಿಗಳ (ಪಿಪಿ) ತಪಾಸಣಾ ವರದಿಯನ್ನು ಸಂಬಂದಪಟ್ಟ ವಿಷಯ ನಿರ್ವಾಹಕರು/ವಸೂಲಿ ಅಧಿಕಾರಿಯು ಮತ್ತು ವಸೂಲಿ ಇಲಾಖೆಯ ಮುಖ್ಯಸ್ಥರು ದೃಢೀಕರಿಸತಕ್ಕದ್ದು. ಆದರೆ, ಸೂತ್ರ 'ಅ' ಯಂತೆ ಒಳಪಟ್ಟಿರುವ ಪ್ರಕರಣಗಳಿಗೆ ಮತ್ತು ಪ್ರಾಥಮಿಕ ಆಸ್ತಿಗಳು ಲಭ್ಯವಿಲ್ಲದ/ಮಾರಾಟವಾದ/ಅಡಮಾನ ಇಲ್ಲದ ಮತ್ತು ಪ್ರವರ್ತಕರು ಸರಳ ಬಡ್ಡಿಯ ಆಧಾರದ ಮೇಲೆ ಬಾಕಿಗಳನ್ನು ಪಾವತಿಸಲು ಮುಂದೆ ಬಂದಂತಹ ಪ್ರಕರಣಗಳಲ್ಲಿ ಪಿಪಿ ಪರಿಶೋಧನೆಯು ಕಡ್ಡಾಯವಾಗಿರುವುದಿಲ್ಲ.

3.3 ಪಿಪಿ ಆಸ್ತಿಗಳ ನಿವ್ವಳ ಮೌಲ್ಯ ಅಂದರೆ, ಮೌಲ್ಯೀಕರಣ ಮಾರ್ಗದರ್ಶನದಂತೆ ವೈಯಕ್ತಿಕ ಆಸ್ತಿಗಳ ಮೌಲ್ಯ ಹಾಗೂ ಸಂಬಂಧಿತ ಆಸ್ತಿಗಳ ಮೌಲ್ಯದಲ್ಲಿ ಇತರೆ ಹಣಕಾಸು ಸಂಸ್ಥೆಗಳ/ಬ್ಯಾಂಕುಗಳ ಹೊಣೆಗಾರಿಕೆಯನ್ನು ಮತ್ತು ಇತರೆ ಶಾಸನಬದ್ದ ಹೊಣೆಗಾರಿಕೆಗಳಾದ ಸರಕುಗಳ & ಸೇವಾ ತೆರಿಗೆ, ಆದಾಯ ತೆರಿಗೆ, ಭವಿಷ್ಯ ನಿಧಿ ಬಾಕಿ ಇತ್ಯಾದಿಗಳನ್ನು ಕಳೆಯುವುದು ಆಗಿರುತ್ತದೆ (ಶಾಸನಬದ್ಧ ಪ್ರಾಧಿಕಾರ ಆಸ್ತಿಯನ್ನು ಮುಟ್ಟುಗೋಲು ಹಾಕಿದ್ದಲ್ಲಿ ಮಾತ್ರ). ಹೆಚ್ಚಿನ ಸಂಖ್ಯೆಯ ಹಕ್ಕುದಾರರು ಇದ್ದಲ್ಲಿ ಸಮಾನ ಭಾಗವನ್ನು ಪರಿಗಣಿಸುವುದು.

3.4 ಪೂರಕ ಭದ್ರತೆಗಳ ಪ್ರಕರಣಗಳಲ್ಲಿ, ಒಟಿಎಸ್ ಮೊಬಲಗನ್ನು ಕ್ರೋಢೀಕರಿಸುವಾಗ ಆಸ್ತಿಗಳ 25% ಮೌಲ್ಯವನ್ನು ರಿಯಾಯತಿಯೆಂದು ಪರಿಗಣಿಸುವುದು.

3.5 ಮುಂದುವರಿದಂತೆ, ಮೇಲ್ಕಂಡಂತೆ ಒಟಿಎಸ್ ಮೊಬಲಗನ್ನು ಲೆಕ್ಕಹಾಕುವಾಗ ಈ ಕೆಳಕಂಡ ರಿಯಾಯತಿಯನ್ನು ಪರಿಗಣಿಸುವುದು:

A) ವಿಭಾಗೀಯ ರಿಯಾಯತಿಗಳು (ಮೇಲಿನ ಕಂಡಿಕೆ 3.1ರಂತೆ ಲೆಕ್ಕಹಾಕಿರುವ ಒಟಿಎಸ್ ಮೊಬಲಗಿನ ಮೇಲೆ)

| **ವಿಭಾಗ** | **ರಿಯಾಯತಿಗಳು** |
|---|---|
| ಕೃಷಿ ಆಧಾರಿತ, ಪುಷ್ಪೋದ್ಯಮ, ಅಂಗಾಂಶ ಕೃಷಿ, ಮೀನುಗಾರಿಕೆ | 15% |
| ರಸಾಯನಿಕಗಳು, ಜವಳಿ, ಔಷಧಗಳು, ಗ್ರಾನೈಟ್, ರಬ್ಬರ್ | 10% |

B) ಮುಖ್ಯ ಪ್ರವರ್ತಕ/ಪೂರಕ ಭದ್ರತೆಯ ಮಾಲೀಕರು ಮರಣ, ಅಶಕ್ಯತೆ, ಮತ್ತು ಗಂಭೀರ ಕಾಯಿಲೆಯ ಪ್ರಕರಣಗಳಲ್ಲಿ 15% ವರೆಗೆ ರಿಯಾಯತಿ. (ಮೇಲಿನ ಕಂಡಿಕೆ 3.1ರಂತೆ ಲೆಕ್ಕಹಾಕಿರುವ ಒಟಿಎಸ್ ಮೊಬಲಗಿನ ಮೇಲೆ ರಿಯಾಯತಿಯನ್ನು ಲೆಕ್ಕಹಾಕುವುದು).

**<u>ಟಿಪ್ಪಣಿ:</u> ಕಂಪನಿಯ ಮುಖ್ಯ ಪ್ರವರ್ತಕರು ಅಂದರೆ ವ್ಯವಸ್ಥಾಪಕ ನಿರ್ದೇಶಕರು ಅಥವಾ ಪಾಲುದಾರ ಸಂಸ್ಥೆಗಳಲ್ಲಿ ಅದರ ವ್ಯವಸ್ಥಾಪಕ ಪಾಲುದಾರರು ಮರಣ ಹೊಂದಿದ್ದಲ್ಲಿ / ಅಶಕ್ಯತೆ ಅಥವಾ ಗಂಭೀರ ಕಾಯಿಲೆಗಳಿಂದ ಬಳಲುತ್ತಿದ್ದಲ್ಲಿ ಮಾತ್ರ ಮೇಲಿನಂತೆ ರಿಯಾಯಿತಿ ಲಭ್ಯವಾಗುತ್ತದೆ.**

C) ಕಂಡಿಕೆ 3.1ರಂತೆ ಲೆಕ್ಕಹಾಕಿರುವ ಒಟಿಎಸ್ ಮೊಬಲಗಿನ ಮೇಲೆ ಹೈದರಾಬಾದ್ ಕರ್ನಾಟಕ ವಲಯದ ಘಟಕಗಳ ಮೇಲೆ 10% ವಿಶೇಷ ರಿಯಾಯತಿಯನ್ನು ಲೆಕ್ಕಹಾಕುವುದು. (ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಕಲ್ಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗಳು)

D) ದಂಡ ವಿಧಿಸುವಿಕೆ: ಮೋಸದ ಅಥವಾ ಕ್ರಿಮಿನಲ್ ದಾವೆಗಳನ್ನು ಹೂಡಿರುವ ಪ್ರಕರಣಗಳಲ್ಲಿ ರಿಯಾಯತಿಗಳನ್ನು ಪರಿಗಣಿಸತಕ್ಕದ್ದಲ್ಲ.

**ಟಿಪ್ಪಣಿ: ಆದಾಗ್ಯೂ ಯಾವುದೇ ಪ್ರಕರಣಗಳಲ್ಲಿ, ಮೇಲೆ ತಿಳಿಸಲಾಗಿರುವ ಒಟ್ಟು ರಿಯಾಯತಿಯು 25%ನ್ನು ಮೀರತಕ್ಕದ್ದಲ್ಲ.**

3.6 ಒಟಿಎಸ್ ಮೊಬಲಗಿನಲ್ಲಿ ಪ್ರಸಕ್ತ ಸಾಲದ ಬಾಕಿಯ 50%ಗಿಂತ ಜಾಸ್ತಿ ಇರುವ ಅಸಲನ್ನು ತೆಗೆದು ಹಾಕಿರುವುದು ಒಳಗೊಂಡಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ವೈಯಕ್ತಿಕ ಆಸ್ತಿಗಳ ತಪಾಸಣೆಯನ್ನು ಮೂರನೇ ಪಾರ್ಟಿಯ ಮೂಲಕ ಮಾಡಿಸತಕ್ಕದ್ದು. (ಖಾಸಗೀ ಪರಿಶೋಧನಾ ಸಂಸ್ಥೆ).

4 **<u>ಮೂರನೇ ಪಾರ್ಟಿಯ ಪೂರಕ ಭದ್ರತೆಗಳನ್ನು ಬಿಡುಗಡೆಗೊಳಿಸಲು ಷರತ್ತುಗಳು:</u>**

**4.1** ಸಾಲಗಳು ಮೂರನೇ ಪಾರ್ಟಿಯ ಪೂರಕ ಭದ್ರತೆಯೊಂದಿಗೆ ಸುರಕ್ಷಿತವಾಗಿದ್ದಲ್ಲಿ (ವಾಸದ ಮನೆ ಅಥವಾ ಬೇರೆ ಯಾವುದೇ ಆಸ್ತಿ) ಅಂತಹ ಆಸ್ತಿಗಳು ಮೇಲೆ ಕಂಡಿಕೆ 3.1ರಲ್ಲಿ ತಿಳಿಸಿರುವಂತೆ ನಿರ್ಧಾರಿತ ಸೂತ್ರಗಳಿಗೆ

ಒಳಪಡದೇ ಇದ್ದಲ್ಲಿ, ಅಂತಹ ಆಸ್ತಿಗಳನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅದರ ಮೌಲ್ಯದ 75%ನ್ನು ವಸೂಲಿ ಮಾಡಿ ಬಿಡುಗಡೆಗೊಳಿಸತಕ್ಕದ್ದು:

a) ಮೂರನೇ ಪಾರ್ಟಿಯನ್ನು, ಘಟಕದಲ್ಲಿ ಯಾವುದೇ ಹಕ್ಕು ಇಲ್ಲದ ಅಥವಾ ಪ್ರವರ್ತಕರಿಗೆ ಯಾವುದೇ ರೀತಿಯಲ್ಲೂ ಸಂಬಂಧಿಸದ ವ್ಯಕ್ತಿಯೆಂದು ವಿವರಿಸಲ್ಪಟ್ಟಿದೆ.

b) ಮೂರನೇ ಪಾರ್ಟಿಯ ಪೂರಕ ಭದ್ರತೆಯನ್ನು ಬಿಡುಗಡೆಗೊಳಿಸುವ ಮನವಿಯು ಭದ್ರತೆಯ ಮಾಲೀಕರಿಂದ ಅಥವಾ ಅವರ ಕಾನೂನುಬದ್ದ ವಾರಸ್ದಾರರಿಂದ ಬಂದಿರತಕ್ಕದ್ದು.

c) ಪೂರಕ ಭದ್ರತೆಗಳ ಮಾಲೀಕರು ವೈಯಕ್ತಿಕ ಭದ್ರತೆಯನ್ನೂ ಒದಗಿಸಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮಾತ್ರ ಅಡಮಾನ ಮಾಡಲ್ಪಟ್ಟ ಆಸ್ತಿಗಳನ್ನು ಬಿಡುಗಡೆಗೊಳಿಸತಕ್ಕದ್ದು. ವೈಯಕ್ತಿಕ ಆಸ್ತಿಗಳ ವಿವರವಾದ ಪರಿಶೀಲನೆಯನ್ನು ನಡೆಸಿದ ನಂತರವೇ ಮತ್ತು ಯಾವುದೇ ವೈಯಕ್ತಿಕ ಆಸ್ತಿಗಳು ಇಲ್ಲ/ಲಭ್ಯವಿಲ್ಲವೆಂದು ದೃಢೀಕರಿಸಿದ ನಂತರವೇ ವೈಯಕ್ತಿಕ ಖಾತರಿಯ ಬಿಡುಗಡೆಯನ್ನು ಪರಿಗಣಿಸತಕ್ಕದ್ದು.

d) ಯಾವುದೇ ಒಂದು ಸಾಲಕ್ಕೆ ಒಂದಕ್ಕಿಂತ ಹೆಚ್ಚು ಪೂರಕ ಭದ್ರತೆಗಳನ್ನು ಒದಗಿಸಿದ್ದಲ್ಲಿ, ಪೂರಕ ಭದ್ರತೆಗಳನ್ನು ಬಿಡುಗಡೆಗೊಳಿಸಲು ಯಾವುದಾದರೂ ಒಬ್ಬ ಮಾಲೀಕರಿಂದ ಬಂದಿರುವ ಮನವಿಯನ್ನು ಪರಿಶೀಲಿಸುವ ಸಮಯದಲ್ಲಿ, ನಿಗಮವು ಬೇರೆ ಇತರೆ ಪೂರಕ ಭದ್ರತೆಗಳ ಮಾಲೀಕರನ್ನೂ ಸಂಪರ್ಕಿಸಿ ಈ ಯೋಜನೆಯ ಬಗ್ಗೆ ಲಿಖಿತ ರೂಪದಲ್ಲಿ ಮಾಹಿತಿ ತಿಳಿಸಿ ಆಸಕ್ತಿ ಇದ್ದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದೆಂದು ತಿಳಿಸತಕ್ಕದ್ದು.

**4.2** ಮೇಲೆ ಪ್ಯಾರಾ 4.1ರಲ್ಲಿ ವಿವರಿಸಿರುವಂತೆ ಒಟಿಎಸ್ ಮೊಬಲಗಿನ ಮೇಲೆ ಈ ಕೆಳಕಂಡ ರಿಯಾಯತಿಯನ್ನು ಪರಿಗಣಿಸತಕ್ಕದ್ದು:

a) ಒದಗಿಸಲಾಗಿರುವ ಪೂರಕ ಭದ್ರತೆಗಳು ವಂಶಪಾರಂಪರ್ಯದಿಂದ ಬಂದಿದ್ದಲ್ಲಿ, ಹೆಚ್ಚುವರಿ 10% ರಿಯಾಯತಿ.

b) ಒಂದುವೇಳೆ ಮೂರನೇ ಪಾರ್ಟಿಯ ಭದ್ರತೆಗಳ ಮಾಲೀಕರು ಮರಣಹೊಂದಿದ್ದಲ್ಲಿ, ಅಥವಾ ಅಶಕ್ತರಾಗಿದ್ದಲ್ಲಿ ಮತ್ತು ಆಸ್ತಿಯನ್ನು ಉಳಿದಿರುವ ಗಂಡ/ಹಂಡತಿಯ ಸ್ವಾಧೀನದಲ್ಲಿದ್ದರೆ ಅಥವಾ ಅವನ/ಅವಳ ಮಗ/ಮಕ್ಕಳ ಮತ್ತು ಅವನ ಅಥವಾ ಅವಳ ಅವಲಂಭಿತ ತಂದೆ ತಾಯಿಯ ಸ್ವಾಧೀನದಲ್ಲಿದ್ದರೆ ಅಥವ ಅಲ್ಲಿ ಯವುದೇ ವಾಸದ ಮನೆಯ ಅಥವಾ ವಾಣಿಜ್ಯ ಆಸ್ತಿಗಳು ಜೀವಿತ ಗಂಡ ಅಥವಾ ಹೆಂಡತಿಯ ಹೆಸರಿನಲ್ಲಿ ಅಥವಾ ಅವಲಂಭಿತ ಮದುವೆಯಾಗದ ಮಕ್ಕಳ ಹೆಸರಿನಲ್ಲಿ ಇಲ್ಲವಾದ ಪಕ್ಷದಲ್ಲಿ ಹೆಚ್ಚುವರಿ 10%.

c) ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದ್ದು, (ಮಿಸಲೇನಿಯಸ್ ಪಿಟಿಷನ್, ಎಕ್ಸೆಕ್ಯೂಶನ್ ಪಿಟಿಷನ್‌ನಲ್ಲಿ ಅಥವಾ ಯಾವುದೇ ದಾವೆಯ ಕಂಡಿಕೆ 32ಜಿ ಅಡಿಯಲ್ಲಿ) 10 ವರ್ಷಗಳಿಗಿಂತ ಹೆಚ್ಚು ಅವಧಿಗೆ ಇತ್ಯರ್ಥವಾಗದೇ ಉಳಿದಿದ್ದಲ್ಲಿ ಹೆಚ್ಚುವರಿ 10%.

d) ಯಾವುದೇ ಪ್ರಕರಣಗಳಲ್ಲಿ, ಮೇಲೆ ಕಂಡಿಕೆ 4.2ರಲ್ಲಿ ತಿಳಿಸಲಾಗಿರುವ ರಿಯಾಯತಿಗಳು ಗರಿಷ್ಟ 25%ಗೆ ಮಾತ್ರ ಮಿತಿಗೊಳ್ಳತಕ್ಕದ್ದು.

## 5 <u>**ವೈಯಕ್ತಿಕ ಭದ್ರತೆಗಳ ಬಿಡುಗಡೆ:**</u>

**5.1** ಈ ಕೆಳಕಂಡವುಗಳಿಗೆ ಒಳಪಟ್ಟು ವೈಯಕ್ತಿಕ ಭದ್ರತೆಗಳನ್ನು ಬಿಡುಗಡೆಗೆ ಪರಿಗಣಿಸಬಹುದಾಗಿರುತ್ತದೆ:

a. ನಿಗಮದ ವಿರುದ್ಧ ಹೂಡಲಾಗಿರುವ ದಾವೆಗಳು ಯಾವುದಾದರೂ ಇದ್ದಲ್ಲಿ ಅದನ್ನು ಜಾಮೀನುದಾರರು ಹಿಂಪಡೆಯತಕ್ಕದ್ದು.

**b.** ಅವನ/ಅವಳ ನೆಟ್‌ವರ್ಥ್‌ನ ಬಗ್ಗೆ ಪ್ರಮಾಣಪತ್ರ ಪಡೆದನಂತರ ಜಾಮೀನುದಾರರ ವೈಯಕ್ತಿಕ ಭದ್ರತೆಗಳ ಬಗ್ಗೆ ವಿವರವಾದ ಪರಿಶೋಧನೆಯನ್ನು ನಡೆಸುವುದು. ಒಟಿಎಸ್‌ನ ಅಡಿಯಲ್ಲಿ ಪಾವತಿಸತಕ್ಕ ಮೊಬಲಗು ಋಣಭಾರವಿಲ್ಲದ ವೈಯಕ್ತಿಕ ಆಸ್ತಿಗಳ 50% ಇರತಕ್ಕದ್ದು. ವೈಯಕ್ತಿಕ ಭದ್ರತೆಗಳನ್ನು ಬಿಡುಗಡೆಗೊಳಿಸಲು ಅಂತಹ ಮನವಿಯನ್ನು ಪರಿಗಣಿಸುವಾಗ ನಿಗಮವು ಇತರ ಜಾಮೀನುದಾರರಿಗೆ ಲಿಖಿತ ರೂಪದಲ್ಲಿ ಯೋಜನೆಯ ಬಗ್ಗೆ ತಿಳಿಸಿ ಆಸಕ್ತಿ ಇದ್ದಲ್ಲಿ ಅದನ್ನು ಉಪಯೋಗಿಸಿಕೊಳ್ಳಲು ಸಲಹೆ ನೀಡತಕ್ಕದ್ದು.

c. ಅಗತ್ಯ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡು, ಪ್ರತಿ ವೈಯಕ್ತಿಕ ಭದ್ರತೆಯ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ, ನಂತರ ಬಿಡುಗಡೆಯನ್ನು ನಿರ್ಧರಿಸಲಾಗುವುದು.

6 **<u>ಬಾಕಿ ಇರುವ ಒಟಿಎಸ್ ಪ್ರಕರಣಗಳು:</u>**

**6.1** ಈ ಹೊಸ ಒಟಿಎಸ್ ನೀತಿಯ ಅಡಿಯಲ್ಲಿ ಪರಿಗಣನೆಯನ್ನು ಬಾಕಿ ಇರಿಸಿಕೊಂಡು 10% ಪ್ರಾರಂಭಿಕ ಮೊಬಲಗನ್ನು ಸ್ವೀಕರಿಸಲ್ಪಟ್ಟ ಎಲ್ಲಾ ಪ್ರಕರಣಗಳನ್ನು ಒಟಿಎಸ್‌ಗೆ ಪರಿಗಣಿಸಬಹುದಾಗಿರುತ್ತದೆ. ಆದಾಗ್ಯೂ, ಹಿಂದಿನ ಒಟಿಎಸ್ ನೀತಿ/ನೀತಿಗಳ ಅನ್ವಯ ಸ್ವೀಕರಿಸಲಾಗಿರುವ ಪ್ರಸ್ತಾವನೆಗಳು ಮತ್ತು ನಿರ್ದೇಶಕರ ಸಮಿತಿಯ ಮುಂದೆ ಚರ್ಚೆಗೆ ಮಂಡಿಸಲಾಗಿರುವ ಮತ್ತು ಮಂಡಳಿಯ ಅಂತಿಮ ಅನುಮೋದನೆ ಬಾಕಿ ಇದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸಂಬಂದಪಟ್ಟ ಒಟಿಎಸ್ ನೀತಿಗಳಿಗೆ ಅನುಸಾರವಾಗಿ ನಿರ್ದೇಶಕರ ಸಮಿತಿಯ ಶಿಫಾರಸ್ಸುಗಳೊಂದಿಗೆ ಮಂಡಳಿಯ ಮುಂದೆ ಮಂಡಿಸತಕ್ಕದ್ದು.

7 **<u>ಒಟಿಎಸ್ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ:</u>**

**7.1** ಈ ನೀತಿಯಲ್ಲಿ ಇರುವ ಯಾವುದೇ ವಿಚಾರವನ್ನು ಒಳಗೊಂಡು, ಈ ನೀತಿಯ ಅಡಿಯಲ್ಲಿ ಸಾಲದ ಬಾಕಿಗಳ ಇತ್ಯರ್ಥಕ್ಕಾಗಿ ಬಂದಿರುವ ಯಾವುದೇ ಅರ್ಜಿಯನ್ನು ಯಾವುದೇ ಹಂತದಲ್ಲಿ, ಅದಕ್ಕೆ ಯಾವುದೇ ಕಾರಣಗಳನ್ನು ನೀಡದೇ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕೆಎಸ್ಐಐಡಿಸಿಯು ಕಾಯ್ದಿರಿಸಿಕೊಂಡಿದೆ. ಈ ನೀತಿಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವಿಕೆಯು ಮತ್ತು/ಅಥವಾ ಪ್ರಾರಂಭಿಕ ಮೊಬಲಗಿನ ಭಾಗವನ್ನು ಅಥವಾ ಪೂರ್ತಿಯಾಗಿ ಪಾವತಿಸುವಿಕೆಯು ಒಟಿಎಸ್‌ಗೆ ಮನವಿ ಸಲ್ಲಿಸಿರುವ ಅರ್ಜಿದಾರನ/ರ ನಿಂತಿರುವ ಬಾಕಿಯ ವಸೂಲಿಗೆ ಇರಬಹುದಾದ ಬೇರೆ ಬದಲೀ ಕ್ರಮಗಳನ್ನು ಕೈಗೊಳ್ಳಲು ಕೆಎಸ್ಐಐಡಿಸಿಗೆ ಪ್ರತಿಬಂಧಿಸುವುದಿಲ್ಲ.

## 8 ಹಿಂದಿನ ಒಟಿಎಸ್ ನೀತಿಯ/ಗಳ ಅಡಿಯಲ್ಲಿ ಅನುಮೋದಿಸಲ್ಪಟ್ಟ ಒಟಿಎಸ್‌ನ ಪುನರುಜ್ಜೀವನ:

**8.1** ಹಿಂದಿನ ಯಾವುದೇ ಒಟಿಎಸ್ ನೀತಿಯ/ಗಳ ಅಡಿಯಲ್ಲಿ ಅಂಗೀಕರಿಸಲ್ಪಟ್ಟು ತದನಂತರ ತಿರಸ್ಕರಿಸಲ್ಪಟ್ಟ/ಹಿಂಪಡೆಯಲಾಗಿರುವ ಪಾರ್ಟಿಗಳ/ಸಾಲಗಾರರ ಆಯ್ಕೆಯ ಅನುಸಾರ ಮನವಿಯಲ್ಲಿ ನೈಜ ಮತ್ತು ಸಮರ್ಥನೀಯವಾದ ಕಾರಣಗಳು ಇದ್ದಲ್ಲಿ, ಮಂಡಳಿಯ ಅನುಮೋದನೆಯೊಂದಿಗೆ ಪುನರುಜ್ಜೀವನಕ್ಕೆ ಪರಿಗಣಿಸಬಹುದಾಗಿರುತ್ತದೆ. ಈ ಅನುಮೋದನೆಯು ಮಂಡಳಿಯು ರೂಪಿಸುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

**8.2** ಕಂಡಿಕೆ 8.1ರಲ್ಲಿ ಉಲ್ಲೇಖಿಸಿರುವ ಪುನರುಜ್ಜೀವನವು ಕಾರ್ಯಸಾಧುವಾಗದಿದ್ದಲ್ಲಿ ಮತ್ತು ಅಥವಾ ಆಯ್ಕೆ ಮಾಡದೇ ಇದ್ದಲ್ಲಿ, ಹೊಸ ಒಟಿಎಸ್‌ನ ಅಡಿಯಲ್ಲಿ ಅರ್ಜಿಯನ್ನು ಪರಿಗಣಿಸಬಹುದಾಗಿರುತ್ತದೆ.

## 9 ಅರ್ಜಿಗೆ ಕಾರ್ಯವಿಧಾನ:

**9.1** ಮೇಲೆ ಕಂಡಿಕೆ 2ರಲ್ಲಿ ವಿವರಿಸಲಾಗಿರುವ ಎಲ್ಲಾ ಅರ್ಹ ಸಾಲದ ಪ್ರಕರಣಗಳಲ್ಲಿ ಮತ್ತು ಮೇಲೆ ಕಂಡಿಕೆ 6ರಲ್ಲಿ ತಿಳಿಸಿರುವಂತೆ ಪರಿಗಣಿಸದೇ ಇರಲು ಕಾರಣಗಳು ಇಲ್ಲದ ಪಕ್ಷದಲ್ಲಿ ನಿಗದಿಪಡಿಸಿರುವ ಪ್ರಾರಂಭಿಕ ಮೊಬಲಗಿನೊಂದಿಗೆ ಕೆಎಸ್‌ಐಐಡಿಸಿಯ ಪರವಾಗಿ ಡಿಮಾಂಡ್ ಡ್ರಾಫ್ಟ್/ಪೇ ಆರ್ಡರ್/ ಬ್ಯಾಂಕರ್ಸ್ ಚೆಕ್/ಎನ್‌ಇಎಫ್‌ಟಿ/ ಆರ್‌ಟಿಜಿಎಸ್‌ನ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.

**9.2** ಮೇಲ್ಕಂಡ ಅಗತ್ಯತೆಗಳನ್ನು ಪೂರೈಸದ ಅರ್ಜಿಯು ಪರಿಪೂರ್ಣವಲ್ಲದ್ದು ಎಂದು ಪರಿಗಣಿಸಲ್ಪಡುವುದು ಮತ್ತು ವಸೂಲಿ ಇಲಾಖೆಯ ಮುಖ್ಯಸ್ಥರಿಂದ ಒಟ್ಟಾರೆಯಾಗಿ ತಿರಸ್ಕರಿಸಲ್ಪಡುವುದು. ಅಂತಹ ಅರ್ಜಿಗಳಿಗೆ ಸ್ವೀಕೃತಿಯನ್ನು ನೀಡತಕ್ಕದ್ದಲ್ಲ.

**9.3** ಅರ್ಹ ಪ್ರಕರಣಗಳು/ಸಾಲ ಪಡೆದಿರುವವರು ನಿಗಧಿತ ನಮೂನೆ **ಅನುಬಂಧ III** ರಲ್ಲಿ ನಿಗಧಿಪಡಿಸುರುವಂತೆ ಪ್ರಮಾಣಪತ್ರವನ್ನು ಒಪ್ಪಿಸತಕ್ಕದ್ದು.

**9.4** ಒಟಿಎಸ್ ಅರ್ಜಿಯನ್ನು ಮತ್ತು ಪ್ರಾರಂಭಿಕ ಪಾವತಿಯನ್ನು ಸ್ವೀಕರಿಸಿದ ನಂತರ ಒಂದು ಸ್ವೀಕೃತಿಯನ್ನು ನೀಡುವುದು ಮತ್ತು ಇದು ಸಹಾಯ ಪಡೆದ ಘಟಕವು(ಗಳು) ಕೆಎಸ್‌ಐಐಡಿಸಿಗೆ ಒಂದು ನಿರ್ಧಿಷ್ಟ ದಿನಾಂಕದಂದು ಅರ್ಜಿಯನ್ನು ಸಲ್ಲಿಸಿರುತ್ತದೆ ಎಂಬುದಕ್ಕೆ ದಾಖಲೆಯಾಗಿರುತ್ತದೆ. **ಅರ್ಜಿಯ ಸ್ವೀಕೃತಿಯು ಮತ್ತು ಪ್ರಾರಂಭಿಕ ನೇರ ಪಾವತಿಯು ಮತ್ತು/ಅಥವಾ ನೀಡಲಾಗಿರುವ ಸ್ವೀಕೃತಿಯು ಸಹಾಯ ಪಡೆದ ಅರ್ಜಿ ಸಲ್ಲಿಸಿರುವ ಘಟಕಕ್ಕೆ(ಗಳಿಗೆ) ಯಾವುದೇ ಹಕ್ಕನ್ನೂ ಕೊಡಮಾಡುವುದಿಲ್ಲ**. ಈ ರೀತಿ ಸ್ವೀಕರಿಸಲ್ಪಟ್ಟ ಅರ್ಜಿ ನಮೂನೆಯು ಮುಂದಿನ ವಿವರವಾದ ಪರಿಶೀಲನೆಗೆಲೊಳಪಡಲಿದ್ದು, ಮತ್ತು ಲೆಕ್ಕಪತ್ರಗಳ ಪರಿಶೀಲನೆ, ದಾಖಲೆಪತ್ರಗಳು, ಆಸ್ತಿಗಳು ಇತ್ಯಾದಿಗಳ

ಪರಿಶೀಲನೆಗೆ ಮತ್ತು ನಂತರದಲ್ಲಿ ಒಟಿಎಸ್ ನೀತಿಯ ಅಡಿಯಲ್ಲಿ ಖಾತೆಯ ಇತ್ಯರ್ಥವೋ ಅಥವಾ ಅಲ್ಲವೋ ಎಂಬ ಬಗ್ಗೆ ತೀರ್ಮಾನವನ್ನು ಕೈಗೊಂಡು ಕೆಎಸ್ಐಐಡಿಸಿಯ ಸೂಕ್ತ ಪ್ರಾಧಿಕಾರವು ಅರ್ಜಿದಾರರಿಗೆ/ಸಹಾಯ ಪಡೆದ ಘಟಕಕ್ಕೆ (ಗಳಿಗೆ) ಮಾಹಿತಿಯನ್ನು ನೀಡತಕ್ಕದ್ದು.

10 <u>**ಈ ಒಟಿಎಸ್ ನೀತಿಯ ಅಡಿಯಲ್ಲಿ ಪಾವತಿಯ ಷರತ್ತುಗಳು:**</u>

10.1 <u>**ಪ್ರಾರಂಭಿಕ ಸಂದಾಯ:**</u> ಈ ಒಟಿಎಸ್ ನೀತಿಯ ಅಡಿಯಲ್ಲಿ ಎಲ್ಲಾ ಅರ್ಜಿದಾರರು ಅರ್ಜಿಯ ಜೊತೆಗೆ ಪ್ರಾರಂಭಿಕ ಮೊಬಲಗನ್ನು ಡೌನ್ ಪೇಮೆಂಟ್ ಆಗಿ ಪಾವತಿಸತಕ್ಕದ್ದು.

10.2 ಪ್ರಾರಂಭಿಕ ಡೌನ್ ಪೇಮೆಂಟ್ ಮೊಬಲಗು ಒಟಿಎಸ್ ಅರ್ಜಿಯ ದಿನಾಂಕದಂದು ಇರುವ ಸಾಲದ ಬಾಕಿಯ 10% [ಬಾಕಿ ಇರುವ ಅಸಲು] ಆಗಿರತಕ್ಕದ್ದು. ಸಾಲದ ಬಾಕಿಯು ಸೊನ್ನೆ ಆಗಿದ್ದಲ್ಲಿ, ಪ್ರಾರಂಭಿಕ ಡೌನ್ ಪೇಮೆಂಟನ್ನು ಸಾಲದ ಬಾಕಿಯು ಸೊನ್ನೆ ಆಗುವ ಮೊದಲು ಇದ್ದ ಮೊಬಲಗಿನ ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು.

10.3 ಪೂರಕ ಭದ್ರತೆಗಳ ಆಸ್ತಿಯ ಬಿಡುಗಡೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂಲ ಪಾವತಿಯು ಪೂರಕ ಭದ್ರತೆಯ ಆಸ್ತಿಯ ಮೌಲ್ಯದ 75% ಮೇಲೆ 10% ಆಗಿರತಕ್ಕದ್ದು.

10.4 ಪಿಜಿಯ ಬಿಡುಗಡೆಯ ಪ್ರಕರಣದಲ್ಲಿ ಡೌನ್ ಪೇಮೆಂಟಿನ ಮೊಬಲಗು ಬಾಕಿ ಇರುವ ಅಸಲು ಮೊಬಲಗಿನ 5% ಆಗಿರತಕ್ಕದ್ದು.

10.5 ಸಹಾಯ ಪಡೆದ ಘಟಕವು ಹಿಂದಿನ ಒಟಿಎಸ್ ನಿಂದ ಪ್ರಸಕ್ತ ಒಟಿಎಸ್‌ಗೆ ಆಯ್ಕೆ ಮಾಡಿಕೊಳ್ಳಲು ಇಚ್ಚಿಸಿದಲ್ಲಿ, ಅವನ/ಅವಳ ಹಿಂದಿನ ಒಟಿಎಸ್ ನೀತಿಗೆ ಎದುರಾಗಿ ಭಾಗಶ: ಹಣ ಪಾವತಿ (part payments) ಯಾವುದಾದರೂ ಇದ್ದಲ್ಲಿ, ಆ ಹಣವನ್ನು ಈಗಿನ ಹೊಸ ಪಾಲಸಿ ಅಡಿಯಲ್ಲಿ 'ಒಟಿಎಸ್ ಹಣ ಪಾವತಿಯೆಂದು' ಪರಿಗಣಿಸಲಾಗುವುದು.

10.6 ಮೂರನೇ ಪಾರ್ಟಿಯ ಪೂರಕ ಭದ್ರತೆಗಳ ಮಾಲೀಕರು ಪೂರಕ ಭದ್ರತೆಗಳ ಆಸ್ತಿಗಳನ್ನು ಬಿಡುಗಡೆ ಮಾಡಲು ಕೋರಿ ಸಾಲದ ಖಾತೆಯ ಭಾಗಶಃ ಮೊಬಲಗನ್ನು ಪಾವತಿಸಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಇಲ್ಲಿಯವರೆಗೆ ಪಾವತಿಸಿರುವ ಮೊಬಲಗನ್ನು ಈ ಯೋಜನೆಯ ಅಡಿಯಲ್ಲಿ ಪೂರಕ ಭದ್ರತೆಯ ಆಸ್ತಿಗಳ ಬಿಡುಗಡೆಯ ಖಾತೆಗೆ ಮಾಡಲಾಗಿರುವ ಭಾಗಶಃ ಪಾವತಿಯೆಂದು ಪರಿಗಣಿಸತಕ್ಕದ್ದು.

10.7ಈ ರೀತಿ ವಸೂಲಿ ಮಾಡಲಾಗಿರುವ ಮೊಬಲಗನ್ನು **"ಇತರೆ ಹೊಣೆಗಾರಿಕೆಗಳು – ಒಟಿಎಸ್ ಖಾತೆ"** ಯಲ್ಲಿ ಅಂತಿಮ ತೀರ್ಮಾನದವರೆಗೂ ಇಡತಕ್ಕದ್ದು ಮತ್ತು ಈ ಖಾತೆಯು ಮರುಪಾವತಿಗೆ ಒಳಪಡತಕ್ಕದ್ದಲ್ಲ.

10.8 **ಒಟಿಎಸ್ ಮೊಬಲಗಿನ ಮೊದಲ ಇಪ್ಪತ್ತೈದು ಪ್ರತಿಶತ :** ಅನುಮೋದಿಸಲ್ಪಟ್ಟ ಒಟಿಎಸ್‌ನ ಮೊದಲ 25% ಮೊಬಲಗನ್ನು (ಪ್ರಾರಂಭಿಕ ಡೌನ್ ಪೇಮೆಂಟ್ ನೀಡಿರುವ ಮೊಬಲಗನ್ನು ಕಳೆದು) ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 30 ದಿನಗಳ ಒಳಗೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಒಟಿಎಸ್ ಅನುಮೋದನೆಯನ್ನು ಹಿಂಪಡೆದಿದೆ/ರದ್ದುಗೊಂಡಿದೆಯೆಂದು ಪರಿಗಣಿಸತಕ್ಕದ್ದು.

10.9 **ಒಟಿಎಸ್ ಮೊಬಲಗಿನ ಎರಡನೇ ಇಪ್ಪತ್ತೈದು ಪ್ರತಿಶತ:** ಅನುಮೋದಿಸಲ್ಪಟ್ಟ ಒಟಿಎಸ್‌ನ ಎರಡನೇ 25% ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 60 ದಿನಗಳ ಒಳಗೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಒಟಿಎಸ್ ಅನುಮೋದನೆಯನ್ನು ಹಿಂಪಡೆದಿದೆ/ರದ್ದುಗೊಂಡಿದೆಯೆಂದು ಪರಿಗಣಿಸತಕ್ಕದ್ದು.

10.10 **ಒಟಿಎಸ್ ಮೊಬಲಗಿನ ಮೂರನೇ ಇಪ್ಪತ್ತೈದು ಪ್ರತಿಶತ:** ಅನುಮೋದಿಸಲ್ಪಟ್ಟ ಒಟಿಎಸ್‌ನ ಮೂರನೇ 25% ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 90 ದಿನಗಳ ಒಳಗೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಒಟಿಎಸ್ ಅನುಮೋದನೆಯನ್ನು ಹಿಂಪಡೆದಿದೆ/ರದ್ದುಗೊಂಡಿದೆಯೆಂದು ಪರಿಗಣಿಸತಕ್ಕದ್ದು.

10.11 **ಒಟಿಎಸ್ ಮೊಬಲಗಿನ ನಾಲ್ಕನೇ ಇಪ್ಪತ್ತೈದು ಪ್ರತಿಶತ:** ಅನುಮೋದಿಸಲ್ಪಟ್ಟ ಒಟಿಎಸ್‌ನ ಮೂರನೇ 25% ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 120 ದಿನಗಳ ಒಳಗೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಒಟಿಎಸ್ ಅನುಮೋದನೆಯನ್ನು ಹಿಂಪಡೆದಿದೆ/ರದ್ದುಗೊಂಡಿದೆಯೆಂದು ಪರಿಗಣಿಸತಕ್ಕದ್ದು.

10.12 ಈ ನೀತಿಯ ಅಡಿಯಲ್ಲಿ ಒಟಿಎಸ್ ಪರಿಗಣನೆಯ ನಂತರದಲ್ಲಿ ರಾಜ್ಯದ/ಕೇಂದ್ರದ ಸಹಾಯಧನ, ಬಡ್ಡಿ ಸಹಾಯಧನ ವಿಮಾ ಕ್ಲೈಮುಗಳು ಇತ್ಯಾದಿಗಳನ್ನು ಕೆಎಸ್‌ಐಐಡಿಸಿಯು ಪಡೆದಿದ್ದಲ್ಲಿ, ಅಂತಹ ಮೊಬಲಗನ್ನು ಒಟಿಎಸ್ ಅನುಮೋದನೆಯ ಸಮಯದಲ್ಲಿ ಕೆಎಸ್‌ಐಐಡಿಸಿಯು ಬಿಟ್ಟುಕೊಟ್ಟಿರುವ ಮೊಬಲಗಿನ ಭಾಗಕ್ಕೆ ಸರಿಹೊಂದಿಸಲಾಗುವುದು.

**10.13 ಒ.ಟಿ.ಎಸ್.ಅಡಿಯಲ್ಲಿ ಹಣವನ್ನು ಮೇಲಿನಂತೆ ಕ್ರಮಬದ್ಧವಾಗಿ ಪಾವತಿಸದೆ, ಮಂಜೂರು ಮಾಡಲಾಗಿರುವ ಒ.ಟಿ.ಎಸ್.ನ್ನು ರದ್ದುಗೊಳಿಸಿ / ಹಿಂಪಡೆದರೆ, ಒ.ಟಿ.ಎಸ್. ಅಡಿಯಲ್ಲಿ ಪಾವತಿಸಿರುವ ಹಣವನ್ನು ಕಂಪನಿಗಾಗಲಿ / ಖಾತ್ರಿದಾರರಿಗಾಗಲಿ ಹಿಂದಿರುಗಿಸಲಾಗುವುದಿಲ್ಲ ಮತ್ತು ಸದರಿ ಹಣವನ್ನು ಸಾಲದ ಕರಾರು ಪತ್ರದ ಅನುಸಾರ ಕಂಪನಿಯ ಸಾಲದ ಖಾತೆಗೆ ಜಮಾ ಮಾಡಿಕೊಳ್ಳಲಾಗುವುದು.**

11 **ಈ ನೀತಿಯ ಅಡಿಯಲ್ಲಿ ಒಟಿಎಸ್ ಅನುಮೋದನೆಯನ್ನು ಪುನರ್‌ಸ್ಥಾಪಿಸುವ ಬಗ್ಗೆ:**

11.1 ಈ ನೀತಿಯ ಅಡಿಯಲ್ಲಿ ಅನುಮೋದಿಸಲ್ಪಟ್ಟ ಒಟಿಎಸ್‌ನ ಪುನಃಸ್ಥಾಪನೆಯನ್ನು, ಅಂತಹ ವಿಸ್ತರಣೆಗೆ ವ್ಯವಸ್ಥಾಪಕ ನಿರ್ದೇಶಕರ ಸೂಕ್ತ ಅನುಮೋದನೆಯೊಂದಿಗೆ ಮತ್ತು ಅನುಮೋದಿಸಲ್ಪಟ್ಟ ಬಾಕಿ ಒಟಿಎಸ್ ಮೊಬಲಗನ್ನು ತಡವಾದ ಅವಧಿಗೆ ವಾರ್ಷಿಕ 9%ನಂತೆ ಸರಳ ಬಡ್ಡಿಯನ್ನು ಲೆಕ್ಕ ಹಾಕಿ ತಡವಾಗಿದ್ದಕ್ಕೆ ವ್ಯವಸ್ಥಾಪಕ

ನಿರ್ದೇಶಕರಿಂದ ಮಾಫಿ ಮಾಡಿಸಿ ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ **365 ದಿನಗಳ ಒಳಗೆ** ಪರಿಗಣಿಸತಕ್ಕದ್ದು. ಪುನಃಸ್ಥಾಪನೆಯನ್ನು ಅನುಮೋದಿಸಲ್ಪಟ್ಟ ಒಟಿಎಸ್ ಮೊಬಲಗಿನ ಯಾವುದೇ 25% ಪಾವತಿಯಲ್ಲಿ ಸುಸ್ತಿದಾರರಾಗಿದ್ದಲ್ಲಿ, ತಡವಾದ ಅವಧಿಗೆ ವಾರ್ಷಿಕ 9% ಸರಳ ಬಡ್ಡಿಯಂತೆ ಲೆಕ್ಕಹಾಕಿ ಸೇರಿಸುವಿಕೆಗೆ ಒಳಪಟ್ಟು ಪರಿಗಣಿಸಬಹುದಾಗಿರುತ್ತದೆ [*ಹಿಂದಿನ ಒಟಿಎಸ್‌ನ ಅಡಿಯಲ್ಲಿ ಮುಂದುವರಿಸಿಕೊಂಡು ಬಂದಿರುವ ಯಾವುದೇ ಜಮಾವನ್ನು ಸರಿಹೊಂದಿಸಿದ ನಂತರ).* ಮೇಲ್ಕಂಡ ಅವಧಿಗಿಂತ ಹೆಚ್ಚಿನ ಯಾವುದೇ ವಿಳಂಭವಾಗಿರುವ ಸಂದರ್ಭಗಳಲ್ಲಿ ತಡವಾದ ಅವಧಿಗೆ ಬಡ್ಡಿಯನ್ನು ಪಾವತಿಸುವುದಕ್ಕೆ ಒಳಪಟ್ಟು, ವಿಳಂಭವನ್ನು ಮನ್ನಿಸಲು ಮಂಡಳಿಯ ಮುಂದೆ ಮಂಡಿಸತಕ್ಕದ್ದು.

## 12 <u>ಪ್ರಾಥಮಿಕ/ಕೊಲ್ಲಾಟರಲ್ ಆಸ್ತಿಗಳ ಮೌಲ್ಯಮಾಪನಕ್ಕೆ ಮಾನದಂಡಗಳು:</u>

12.1 ಜಮೀನು ಮತ್ತು ಕಟ್ಟಡದ ಮೌಲ್ಯ ಮಾಪನದ ಉದ್ದೇಶಕ್ಕಾಗಿ ಈ ಕೆಳಕಂಡ ಅಳತೆಗೋಲನ್ನು ಅನ್ವಯಿಸಕ್ಕದ್ದು:

| **ಕ್ರಮ ಸಂಖ್ಯೆ** | **ಮೌಲ್ಯ ಮಾಪನ ಮಾಡಬೇಕಾದ ಪ್ರದೇಶ** | **ಮೌಲ್ಯಮಾಪನದ ವಿಧಾನ** |
|---|---|---|
| 1 | ನಗರ ಪ್ರದೇಶಗಳು ಮತ್ತು ಅರೆ ನಗರ ಪ್ರದೇಶಗಳು (ಪ್ರಾಥಮಿಕ, ಕೊಲ್ಲಾಟರಲ್ ಮತ್ತು ಪಿಪಿ ಆಸ್ತಿಗಳಿಗೆ) | 100% ಮಾಗದರ್ಶಿ ಮೌಲ್ಯ ಅಥವಾ ಮಾರುಕಟ್ಟೆ ಮೌಲ್ಯ ಇವುಗಳಲ್ಲಿ ಯಾವುದು ಜಾಸ್ತಿಯೋ ಅದನ್ನು ಪರಿಗಣನೆಗೆ ತೆಗೆದುಕೊಂಡು ಮೌಲ್ಯಮಾಪನವನ್ನು ನಿಗಧಿಪಡಿಸತಕ್ಕದ್ದು. |
| 2 | ಗ್ರಾಮೀಣ ಪ್ರದೇಶಗಳು (ಪ್ರಾಥಮಿಕ, ಕೊಲ್ಲಾಟರಲ್ ಮತ್ತು ಪಿಪಿ ಆಸ್ತಿಗಳಿಗೆ) | 100% ಮಾಗದರ್ಶಿ ಮೌಲ್ಯವನ್ನು ಪರಿಗಣನೆಗೆ ತೆಗೆದುಕೊಂಡು ಮೌಲ್ಯಮಾಪನವನ್ನು ನಿಗಧಿಪಡಿಸತಕ್ಕದ್ದು. |

12.2 ಸ್ಥಾವರ ಮತ್ತು ಯಂತ್ರೋಪಕರಣಗಳ ಮೌಲ್ಯಮಾಪನವನ್ನು ಅದರ ರಚನೆ, ಉತ್ಪಾದನೆಯ ವರ್ಷ, ಉಪಯೋಗ, ಸವೆತ ಮತ್ತು ಕಡಿತ, ಅಳಿವು, ಬಿಡಿಭಾಗಗಳ ಲಭ್ಯತೆ ಮತ್ತು ಮುಕ್ತಾಯದ ಅವಧಿ ಇತ್ಯಾದಿಗಳನ್ನು ಪರಿಗಣನೆಗೆ ತೆಗೆದುಕೊಂಡು ಮಾಡತಕ್ಕದ್ದು.

12.3 ಕೆಐಎಡಿಬಿಗೆ ಪಾವತಿಸಬೇಕಾಗಿರುವ ಬಾಕಿಗಳು, ವಿದ್ಯುತ್ ಪೂರೈಕೆ, ಶಾಸನಬದ್ಧ ಬಾಕಿಗಳು, ತಕರಾರು ಇತ್ಯಾದಿಗಳ ಮಾಹಿತಿಗಳನ್ನು ಒಳಗೊಂಡಂತೆ ಆಸ್ತಿಗಳ ಮೇಲಿನ ಋಣಭಾರ ಹೊಣೆಗಾರಿಕೆಗಳನ್ನು ಗಮನದಲ್ಲಿ ಇಟ್ಟುಕೊಂಡು ಆಸ್ತಿಗಳ ಮಾರುಕಟ್ಟೆ ಮೌಲ್ಯವನ್ನು ಲೆಕ್ಕಹಾಕತಕ್ಕದ್ದು.

### 12.3 ನಗರ ಮತ್ತು ಅರೆ ನಗರ ಪ್ರದೇಶಗಳ ವ್ಯಾಖ್ಯಾನ:

**12.4** ಬಿಬಿಎಂಪಿ, ಬಿಎಂಆರ್‌ಡಿಎ, ಬಿಐಎಪಿಎ, ಎಲ್ಲಾ ನಗರಸಭೆ ನಿಗಮಗಳು, ಎಲ್ಲಾ ಜಿಲ್ಲಾ ಕೇಂದ್ರಗಳು, ಎಲ್ಲಾ ಪುರಸಭೆಗಳ ವ್ಯಾಪ್ತಿಗೆ ಬರುವ ಪ್ರದೇಶಗಳು ನಗರ ಪ್ರದೇಶಗಳಾಗಿರುತ್ತವೆ. ಮುಂದುವರಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊರಗಿನ ಸರಹದ್ದಿನ 25 ಕಿ.ಮೀಗಳ ವ್ಯಾಪ್ತಿಯ ಒಳಗೆ

ಬರುವ ಪ್ರದೇಶಗಳು, ಇತರ ನಗರ ನಿಗಮಗಳ ಹೊರಗಿನ ಸರಹದ್ದಿನ 10 ಕಿಮೀ ವ್ಯಾಪ್ತಿಯ ಒಳಗಿನ ಪ್ರದೇಶಗಳು ಮತ್ತು ನಗರ/ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಗಳ ಸರಹದ್ದಿನ ಹೊರಗಿನ 5 ಕಿ.ಮೀ ವ್ಯಾಪ್ತಿಯ ಒಳಗೆ ಬರುವ ಪ್ರದೇಶಗಳನ್ನು ಉಪ ನಗರ ಪ್ರದೇಶವೆಂದು ಪರಿಗಣಿಸತಕ್ಕದ್ದು.

12.5 **ಗ್ರಾಮೀಣ ಪ್ರದೇಶಗಳ ವ್ಯಾಖ್ಯಾನ**: ಮೇಲೆ (1)ರಲ್ಲಿ ತಿಳಿಸಿರುವುದನ್ನು ಹೊರತುಪಡಿಸಿ ಎಲ್ಲಾ ಪ್ರದೇಶಗಳು. ಪ್ರಾಥಮಿಕ ಮತ್ತು ಕೊಲ್ಲಾಟರಲ್ ಆಸ್ತಿಗಳ ಮೌಲ್ಯಮಾಪನವನ್ನು ಪಟ್ಟಿಯಲ್ಲಿರುವ ಬಾಹ್ಯ ಮೌಲ್ಯಮಾಪಕರಿಂದ ಮಾಡಿಸಿಕೊಳ್ಳತಕ್ಕದ್ದು.

13 **ಅಧಿಕಾರ ನಿಯೋಜನೆ:**

13.1 **ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ ಇವರ ಅಧ್ಯಕ್ಷತೆಯಲ್ಲಿ ಒಟಿಎಸ್‌ಗೆ ಸಂಬಧಿಸಿದ ಮಂಡಳಿ ಸಭೆಯ ಉಪ ಸಮಿತಿ:**

ಸಾಲಪಡೆದ ಘಟಕಗಳಿಂದ ನಿಗಧಿತ ಪ್ರಾರಂಭಿಕ ಡೌನ್ ಪೇಮೆಂಟಿನೊಂದಿಗೆ ಒಟಿಎಸ್ ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಲು ಬಂದಿರುವ ಮನವಿಗಳಿಗೆ ಕೆಎಸ್ಐಐಡಿಸಿಯಿಂದ ಒಟಿಎಸ್ ನೀಡಿಕೆ ಪತ್ರವನ್ನು ನೀಡಲು ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ ಅವರು ಅಧಿಕಾರ ಉಳ್ಳವರಾಗಿರುತ್ತಾರೆ. ಕೆಎಸ್ಐಐಡಿಸಿಯಿಂದ ಕೇವಲ ಒಟಿಎಸ್ ನೀಡಿಕೆ ಪತ್ರವನ್ನು ಹೊರಡಿಸಿರುವುದು ಸಾಲ ಪಡೆದಿರುವವರಿಗೆ ಈ ಯೋಜನೆಯ ಅಡಿಯಲ್ಲಿ ಒಟಿಎಸ್‌ಗೆ ಪರಿಗಣನೆಗೆ ಯಾವುದೇ ರೀತಿಯ ಹಕ್ಕು ನೀಡುವಿಕೆಯೆಂದು ಅರ್ಥ ನೀಡುವುದಿಲ್ಲ. ಒಟಿಎಸ್‌ನ ಅಡಿಯಲ್ಲಿ ಪರಿಗಣನೆಗೆ ಬಂದಿರುವ ಎಲ್ಲಾ ಪ್ರಸ್ತಾವನೆಗಳು ಒಟಿಎಸ್ ನೀತಿಯಲ್ಲಿ ನಿಗಧಿಪಡಿಸಿರುವಂತಹ ಮಾಪನಮಟ್ಟಕ್ಕೆ ಅನುಗುಣವಾಗಿ ವಿವರವಾದ ಪರಿಶೀಲನೆಗೆ ಒಳಪಟ್ಟಿರುತ್ತದೆ. ಎಲ್ಲಾ ಒಟಿಎಸ್ ಪ್ರಸ್ತಾವನೆಗಳು ಕಡ್ಡಾಯವಾಗಿ ಕಂಡಿಕೆ 3.1 (ಅ ಯಿಂದ ಊ), ಕಂಡಿಕೆ 3.2, 4 ಮತ್ತು 5 ರಲ್ಲಿರುವ ಇತ್ಯರ್ಥ ಸೂತ್ರದ ಅಡಿಯಲ್ಲಿ ಬರಲಿದ್ದು, ಒಟಿಎಸ್‌ನ್ನು ಅನುಮೋದಿಸಲು ಮಂಡಳಿಯ ಒಟಿಎಸ್‌ನ ಉಪ ಸಮಿತಿ ಅಧಿಕಾರಹೊಂದಿರುತ್ತದೆ. ಅಂತಹ ಅನುಮೋದನೆಯನ್ನು ಸೂಕ್ತ ಅನುಸರಣಾ ಮಾಹಿತಿಯೊಂದಿಗೆ ಮಂಡಳಿಗೆ ಮಾಹಿತಿ ನೀಡಬೇಕಾಗಿರುತ್ತದೆ.

13.2 **ಮಂಡಳಿ:**

(a) ಮೇಲೆ 13.1 ಒಳಗೊಂಡಿರದೇ ಇರುವ ಎಲ್ಲಾ ಪ್ರಸ್ತಾವನೆಗಳು.

(b) ಮೇಲೆ ತಿಳಿಸಲಾಗಿರುವುದಕ್ಕೆ ಹೊರತಾಗಿಯೂ, ಕೆಎಸ್ಐಐಡಿಸಿಯ ಮಂಡಳಿಯು, ಈ ಕೆಳಕಂಡ ಪ್ರಕರಣಗಳಲ್ಲಿ, ಕೆಎಸ್ಐಐಡಿಸಿಯ ಹಿತಾಸಕ್ತಿಯಿಂದ ಒಟಿಎಸ್ ಪ್ರಸ್ತಾವನೆಗಳನ್ನು ತಿರಸ್ಕರಿಸಬಹುದಾಗಿರುತ್ತದೆ:

ಈ ಕೆಳಗೆ ತಿಳಿಸಿರುವಂತಹ ತಪ್ಪು ನಿರ್ವಹಣೆ/ನಿರ್ಲಕ್ಷ್ಯ/ಪ್ರವರ್ತಕರಿಂದ ಅಥವಾ ಜಾಮೀನುದಾರರಿಂದ ಉದ್ದೇಶಪೂರ್ವಕ ಕರ್ತವ್ಯ ಲೋಪ ಮುಂತಾದ ಕಾರಣದಿಂದ ಯೋಜನೆಯು ವಿಫಲವಾಗಿರುವ ಪ್ರಕರಣಗಳಲ್ಲಿ:

- ಉತ್ತಮ ನೆಟ್‌ವರ್ಥ್ ಮತ್ತು ನಗದು ಹರಿವಿನ ಹೊರತಾಗಿಯೂ ಉದ್ದೇಶಪೂರ್ವಕವಾಗಿ ಬಾಕಿಗಳನ್ನು ಪಾವತಿಸದೇ ಇರುವುದು;
- ಘಟಕಕ್ಕೆ ಹಾನಿಯಾಗುವಂತೆ ನಿಧಿಗಳನ್ನು ಬೇರೆಕಡೆಗೆ ತಿರುಗಿಸಿ ಕರ್ತವ್ಯಲೋಪವೆಸಗುವುದು;
- ಹಣಕಾಸಿನ ನೆರವು ಪಡೆದ ಆಸ್ತಿಗಳನ್ನು ಖರೀದಿಸದೇ ಇರುವುದು ಅಥವಾ ಅವುಗಳನ್ನು ಮಾರಾಟ ಮಾಡಿ, ಬಂದ ಮೊಬಲಗನ್ನು ದುರುಪಯೋಗಪಡಿಸಿಕೊಳ್ಳುವುದು;
- ದಾಖಲೆಗಳ ತಪ್ಪು ನಿರ್ವಹಣೆ/ಸುಳ್ಳು ಸೃಷ್ಟಿ;
- ಕೆಎಸ್‌ಐಐಡಿಸಿಯ ಗಮನಕ್ಕೆ ಬಾರದಂತೆ ಭದ್ರತೆಗಳ ವಿಲೇವಾರಿ/ತೆಗೆದುಹಾಕುವಿಕೆ;
- ಸಾಲಗಾರರಿಂದ ವಂಚನೆಯ ವ್ಯವಹಾರಗಳು.

## 14. <u>ವ್ಯಾಖ್ಯಾನ:</u>

14.1 ಈ ನೀತಿಯ ಜಾರಿಯಲ್ಲಿ ಅಥವಾ ಯಾವುದೇ ಶರತ್ತು ಅಥವಾ ಕಂಡಿಕೆಯನ್ನು ಅರ್ಥಮಾಡಿಕೊಳ್ಳುವಿಕೆಯಲ್ಲಿ ಯಾವುದೇ ರೀತಿಯ ಸಂದಿಗ್ಧತೆ, ಅಥವಾ ಗೊಂದಲ ಕಂಡುಬಂದಲ್ಲಿ ಅದನ್ನು ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರತಕ್ಕದ್ದು ಮತ್ತು ಅವರು ಈ ಬಗ್ಗೆ ಅಗತ್ಯವಾದ ಸ್ಪಷ್ಟೀಕರಣ ನೀಡಲು ಮತ್ತು ಈ ನೀತಿಯ ಸರಾಗ ನಿರ್ವಹಣೆ ಮತ್ತು ಜಾರಿ ಮಾಡುವ ಸಲುವಾಗಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರವಾಗಿರುತ್ತಾರೆ. ಅಂತಹ ಪರಿಗಣನೆಯ ನಂತರ, ನೀತಿಯ ಜಾರಿಗೆ ಅಗತ್ಯವಾದ ನಿರ್ವಹಣಾ ಸೂಚನೆಗಳನ್ನು ವ್ಯವಸ್ಥಾಪಕ ನಿರ್ದೇಶಕರು ನೀಡತಕ್ಕದ್ದು.

–౦ಔ౦–

ಅನುಬಂಧ – I

**ವಿಷಯ ಸಂಖ್ಯೆ _______**

**ಕರ್ನಾಟಕ ರಾಜ್ಯ ಕೈಗಾರಿಕಾ & ಮೂಲಸೌಲಭ್ಯ ಅಭಿವೃದ್ಧಿ ನಿಗಮ**

**<u>ವಸೂಲಿ ಇಲಾಖೆ</u>**

**ದಿನಾಂಕ ___________ ರಂದು ನಡೆದ ______ನೇ ಮಂಡಳಿಯ ಸಭೆಯ ಮುಂದೆ ಮಂಡಿಸಿದೆ.**

ವಿಷಯ: ಒಟಿಎಸ್ ನೀತಿ 2019 ಅಡಿಯಲ್ಲಿ ಇತ್ಯರ್ಥದ ಪ್ರಸ್ತಾವನೆ –
ಮೆ. _________________________________ ಇವರಿಗೆ ಸಂಬಂಧಿಸಿದೆ.

__¨

ಡ

| | | |
|---|---|---|
| 1 | ಘಟಕದ/ಪಾರ್ಟಿಯ ಹೆಸರು & ವಿಳಾಸ | |
| 2 | ಖಾತೆ ನಂ. | |
| 3 | ಸಂವಿಧಾನ (ಮಾಲೀಕತ್ವ/ಪಾಲುದಾರಿಕೆ/ಕಂಪೆನಿ) | |
| 4 | ಪ್ರವರ್ತಕರ/ರುಗಳ ಹೆಸರು | |
| 5 | ಜಾಮೀನುದಾರರ ಹೆಸರು | |

| 6 | ಸಾಲದ ವಿವರಗಳು | ಮಂಜೂರಾತಿ ದಿನಾಂಕ | ಮಂಜೂರಾದ ಮೊಬಲಗು | ಬಿಡುಗಡೆಯಾದ ಮೊಬಲಗು | ಬಡ್ಡಿ ದರ % |
|---|---|---|---|---|---|
| | | | **(ರೂಪಾಯಿಗಳು ಲಕ್ಷಗಳಲ್ಲಿ)** | | |
| | ಅವಧಿ ಸಾಲ | | | | |
| | ಹೆಚ್ಚುವರಿ ಅವಧಿ ಸಾಲ | | | | |
| | ಬ್ರಿಡ್ಜ್ ಸಾಲ | | | | |
| | **ಮೊತ್ತ** | | | | |

| | | |
|---|---|---|
| 7 | ಮಂಜೂರಾತಿ ಪ್ರಾಧಿಕಾರ | |
| 8 | ಚಟುವಟಿಕೆ/ಉತ್ಪನ್ನ | |
| 9 | ಪ್ರಸ್ತಾವನೆಯು ಸಿಆರ್‌ಇ ವಲಯದ ಅಡಿಯಲ್ಲಿ ಬರುತ್ತದೆಯೇ? | |

| 10 | ಒಟ್ಟುಗೂಡಿಸಲ್ಪಟ್ಟ ಬೇಡಿಕೆ 10.12.2018ರ ವರೆಗೆ | ಅವಧಿ ಸಾಲ (ರೂ. ಲಕ್ಷಗಳಲ್ಲಿ) | | ಖಖಅ | |
|---|---|---|---|---|---|
| | | ಸಾಮಾನ್ಯ | ಒಪ್ಪಂದದ ದರದಲ್ಲಿ ಸರಳ ಬಡ್ಡಿ | ಸಾಮಾನ್ಯ | ಸರಳ ಬಡ್ಡಿ |
| | ಅಸಲು | | | | |
| | ಬಡ್ಡಿ | | | | |
| | ಇತರೆ ಬಾಕಿಗಳು | | | | |
| | ಮೊತ್ತ: | | | | |

| | | | | | |
|---|---|---|---|---|---|
| 11 | ಇಲ್ಲಿಯವರೆಗೆ ಸ್ವೀಕರಿಸಲ್ಪಟ್ಟ ಮರುಪಾವತಿ: | | | | |
| | ಅಸಲು | | | | |
| | ಬಡ್ಡಿ | | | | |
| | ಇತರೆ ಬಾಕಿಗಳು | | | | |
| | ಮೊತ್ತ: | | | | |

- ಒಟಿಎಸ್ ನ ಬಾಬ್ತು ಈ ಹಿಂದೆ ಸ್ವೀಕರಿಸಲಾದ ಮೊಬಲಗು ರೂ. ______________ನ್ನು ಹೊರತುಪಡಿಸಿ

| | | |
|---|---|---|
| | ನೇರ ಪಾವತಿ ಮೂಲಕ<br>ಆಸ್ತಿಗಳ ಮಾರಾಟದ ಮೂಲಕ<br>ಸಹಾಯ ಧನದಿಂದ<br>**ಮೊತ್ತ:** | |
| | ಇಲ್ಲಿಯವರೆಗೆ ಸ್ವೀಕರಿಸಲಾದ ಮರುಪಾವತಿಗೆ ಐಆರ್‌ಆರ್:<br>ಪ್ರಸ್ತಾವಿತ ಒಟಿಎಸ್‌ಗೆ ಐಆರ್‌ಆರ್: | |

| | | | | | |
|---|---|---|---|---|---|
| 12 | ಪ್ರಸಕ್ತ ಬಾಕಿ<br>(ದಿನಾಂಕ __________ ರಲ್ಲಿರುವಂತೆ)<br>ಅಸಲು<br>ಬಡ್ಡಿ<br>ಇತರೆ ಬಾಕಿಗಳು<br>ಮೊತ್ತ: | | | | |
| 13 | ಆಸ್ತಿಯ ಪ್ರವರ್ಗ | (ದಿನಾಂಕ ________ ರಲ್ಲಿರುವಂತೆ :<br>(ದಿನಾಂಕ _______ ರಲ್ಲಿರುವಂತೆ : | | | |
| 14 | ಘಟಕವು ಎಂಸಿಎಆರ್‌ನ ಅಡಿಯಲ್ಲಿ ಅರ್ಹವಾಗಿದೆಯೇ ಮತ್ತು ಅನರ್ಹ ಪರಿಚ್ಛೇದದ ಅಡಿಯಲ್ಲಿ ಬರುವುದಿಲ | | | | |

| | | | | |
|---|---|---|---|---|
| 15 | ಲಭ್ಯವಿರುವ ಭದ್ರತೆಗಳ ವಿವರಗಳು | ಮೆಮೊರಾಂಡಮ್ ಮೌಲ್ಯ ರೂ. ಲಕ್ಷಗಳಲ್ಲಿ | ಪ್ರಸಕ್ತ ಮೌಲ್ಯ (ರೂ. ಲಕ್ಷಗಳಲ್ಲಿ) | |
| | | | ಎಸ್.ಆರ್.ದರ | ಮಾರುಕಟ್ಟೆ ಮೌಲ್ಯ |
| | ಚ)ಜಮೀನು<br>}<br>ಚ) ಕಟ್ಟಡ<br>}<br>ಛ) ಸ್ಥಾವರ&ಯಂತ್ರೋಪಕರಣ }<br><br>ಛಿ) ಪೂರಕ ಭದ್ರತೆಗಳು<br>ಜ) ಚಾಲ್ತಿ ಆಸ್ತಿಗಳು<br><br>**ಮೊತ್ತ** | | | |

| | | | |
|---|---|---|---|
| 16 | ಸಾಲಕ್ಕಾಗಿ ಯಾವುದಾದರೂ ಕಾರ್ಪೊರೇಟ್ ಭದ್ರತೆಗಳನ್ನು ಪಡೆಯಲಾಗಿದ್ದರೆ ಅವುಗಳ ವಿವರ:<br>ಚ) ಆಸ್ತಿಗಳ ವಿವರ<br>ಛ) ಹೊಣೆಗಾರಿಕೆಗಳ ವಿವರ<br>ಛಿ) ವ್ಯವಹಾರದ ಫಲಿತಾಂಶಗಳು<br>ಜ) ಕಂಪೆನಿಯ ನೆಟ್‌ವರ್ಥ್ | | |
| 17 | ಮಾರಾಟಕ್ಕಾಗಿ ತರಲಾಗಿರುವ ಆಸ್ತಿಗಳ ವಿವರ<br><br>ಚ) ಪ್ರಾಥಮಿಕ ಆಸ್ತಿಗಳು | ಜಾಹೀರಾತುಗಳ ಸಂಖ್ಯೆ | ಸ್ವೀಕರಿಸಲಾಗಿರುವ ಅತ್ಯಧಿಕ ಆಫರುಗಳು ಮತ್ತು ದಿನಾಂಕ (ರೂಪಾಯಿಗಳು ಲಕ್ಷಗಳಲ್ಲಿ) |

| | | | |
|---|---|---|---|
| | – ಜಮೀನು & ಕಟ್ಟಡ )<br>– ಸ್ಥಾವರ & ಯಂತ್ರೋಪಕರಣ )<br>– ಚಾಲ್ತಿ ಆಸ್ತಿಗಳು<br>ಛ) ಪೂರಕ ಭದ್ರತೆ * | | |

| | |
|---|---|
| 18 | ವೈಯಕ್ತಿಕ ಆಸ್ತಿಗಳ ಪರಿಶೋಧನೆಯ ವಿವರಗಳು (ಪ್ರವರ್ತಕರು/ಜಮೀನುದಾದರು ಇಬ್ಬರಿಗೂ ಸಂಬಂಧಿಸಿದ್ದು): |

| **ಚ) ಸಾಲ ಮಂಜೂರಾತಿಯ ಸಮಯದಲ್ಲಿ ಘೋಷಿಸಲಾಗಿರುವ ನೆಟ್ ವರ್ಥ್:** | | | |
|---|---|---|---|
| ಕ್ರಮ ಸಂಖ್ಯೆ | ಇರುವ ಸ್ಥಳ, ಅಳತೆಯೊಂದಿಗೆ ಸ್ಥಿರ ಆಸ್ತಿಗಳ ವಿವರಗಳು | ಮಾಲೀಕರ ವಿವರ | ಆಸ್ತಿಯ ಮೌಲ್ಯ |
| | ಕೆಎಸ್‌ಎಫ್‌ಸಿಯ ಮೆಮೊರಾಂಡಮ್‌ನ್ನು ಅಳವಡಿಸಿಕೊಮಡಿರುವುದರಿಂದ ವೈಯಕ್ತಿಕ ವಿವರ ಮತ್ತು ನೆಟ್‌ವರ್ಥ್ ಕೋಷ್ಟಕಗಳು ಮೆಮೊರಾಂಡಮ್ ಜೊತೆಗೆ ಲಭ್ಯವಿರುವುದಿಲ್ಲ. | | |

| **ಛ) ಗುರುತಿಸಲಾಗಿರುವ ವೈಯಕ್ತಿಕ ಆಸ್ತಿಗಳ ವಿವರಗಳು:** | | | | | |
|---|---|---|---|---|---|
| ವಿವರಗಳು | ಮಾಲೀಕರ ಹೆಸರು | ಆಸ್ತಿಯ ಮೌಲ್ಯ | | ಜಂಟೀ ಮಾಲೀಕತ್ವದ ಸಂದರ್ಭದಲ್ಲಿ ಭಾಗದ ಪ್ರತಿಶತ | |
| | | ಎಸ್.ಆರ್. ಮೌಲ್ಯ | | | |

| | | | |
|---|---|---|---|
| ಛ) ಈ ಆಸ್ತಿಗಳ ಮೇಲೆ ಹೊಣೆಗಾರಿಕೆಗಳು ಏನಾದರೂ ಇದಲ್ಲಿ ನಮೂದಿಸಿ | | | |
| ಜ) ವೈಯಕ್ತಿಕ ಆಸ್ತಿಗಳ ನಿವ್ವಳ ಮೌಲ್ಯ : | ಪಿಪಿ ಮೌಲ್ಯ | ನೀತಿಯಂತೆ ರಿಯಾಯತಿಗಳು | ರಿಯಾಯತಿಗಳ ನಿವ್ವಳ |
| ಎಸ್.ಆರ್. ದರದ ಆಧಾರದ ಮೇಲೆ<br>ಮಾರುಕಟ್ಟೆ ದರದ ಆಧಾರದ ಮೇಲೆ | | | |
| ಜ) ಪಿಜಿ ದಾವೆಗಳೇನಾದರೂ ಹೂಡಿದ್ದಲ್ಲಿ ಅದರ ಪ್ರಸಕ್ತ ಸ್ಥಿತಿ | | | |

| | | |
|---|---|---|
| 19 | ಪ್ರವರ್ತಕರು/ಜಾಮೀನುದಾರರಿಂದ ಪ್ರಮಾಣ ಪತ್ರವನ್ನೇನಾದರೂ ಪಡೆಯಲಾಗಿದೆಯೇ | |
| 20 | ಯಾವುದಾದರೂ ವ್ಯಾಜ್ಯ/ ನ್ಯಾಯಾಲಯದ ತಡೆಯಾಜ್ಞೆ/ಪ್ರತಿಭಂದಕಾಜ್ಞೆಯು ಬಿಐಎಫ್ಆರ್/ಎಐಎಫ್ಆರ್ ಮತ್ತು ಇತರ ಯಾವುದೇ ವೇದಿಕೆಯ ಮುಂದೆ ಬಾಕಿ ಇದೆಯೆ | |
| 21 | ಘಟಕದ ಕಾರ್ಯನಿರ್ವಹಣೆಯ ಸ್ಥಿತಿ | |
| 22 | ಪ್ರಾರಂಭಿಕ ಮೊಬಲಗು ಪಾವತಿಯ ವಿವರಗಳು | |

| | | |
|---|---|---|
| 23 | ಸಿಬ್ಬಂದಿಯ ಲೆಕ್ಕಪತ್ರ ಭಾದ್ಯತೆಗಳೇನಾದರೂ ಇದ್ದಲ್ಲಿ ವಿವರಗಳು | |

| | | |
|---|---|---|
| 24 | ಇತ್ಯರ್ಥದ ಮೊಬಲಗನ್ನು ಗುರುತಿಸಲು ಮೌಲ್ಯಮಾಪನಗಳು<br>ಪ್ರಾಥಮಿಕ ಆಸ್ತಿಗಳು<br>ಪೂರಕ ಆಸ್ತಿಗಳು<br>ಪಿಪಿ ಆಸ್ತಿಗಳ ನಿವ್ವಳ ಮೌಲ್ಯ(50%)<br>**ಮೊತ್ತ** | **[ರೂಪಾಯಿಗಳು ಲಕ್ಷಗಳಲ್ಲಿ]** |

25. ಕೆಎಸ್ಎಫ್‌ಸಿ/ಬ್ಯಾಂಕುಗಳು ಮತ್ತಿತರ ಸಂಸ್ಥೆಗಳಿಂದ ಪಡೆಯಲಾಗಿರುವ ಸಾಲಗಳ/ ಹಣಕಾಸಿನ ನೆರವುಗಳ ವಿವರಗಳು:

ಂ)

| | | |
|---|---|---|
| ಚಿ) | ಸಂಸ್ಥೆ/ಬ್ಯಾಂಕಿನ ಹೆಸರು | |
| ಛಿ) | ಜಂಟೀ ಹಣಕಾಸಿನ ನೆರವು ಇದ್ದಲ್ಲಿ ಪ್ರಮುಖ ಸಂಸ್ಥೆಯ ಹೆಸರು | |
| ಛಿ) | ಮಂಜೂರಾಗಿರುವ/ವಿತರಣೆಯಾಗಿರುವ ಮೊಬಲಗು | |
| ಜ) | ಪ್ರಸಕ್ತ ಹೊಣೆಗಾರಿಕೆ<br>(ದಿನಾಂಕ ರಲ್ಲಿ ಇರುವಂತೆ) | ಅಸಲು ಬಾಕಿ :<br>ಬಡ್ಡಿ:ಚಕ್ರಬಡ್ಡಿ ಆಧಾರ :<br>ಬಡ್ಡಿ: ಸರಳ ಬಡ್ಡಿ ಆಧಾರ :<br>ಇತರೆ ಬಾಕಿಗಳು : |
| ಜ) | ಕೈಗೊಳ್ಳಲಾಗಿರುವ ವಸೂಲಿ ಪ್ರಕ್ರಿಯೆಯ ವಿವರಗಳು | |
| ಜಿ) | ಅವರಿಂದ ಒಟಿಎಸ್ ಪಡೆದಿದ್ದಲ್ಲಿ ಅವುಗಳ ವಿವರಗಳು | |

ಃ)

| | | |
|---|---|---|
| ಚಿ) | ಸಂಸ್ಥೆ/ಬ್ಯಾಂಕಿನ ಹೆಸರು | |
| ಛ) | ಜಂಟೀ ಹಣಕಾಸಿನ ನೆರವು ಆಗಿದ್ದಲ್ಲಿ ಪ್ರಮುಖ ಸಂಸ್ಥೆಯ ಹೆಸರು | |
| ಛಿ) | ಮಂಜೂರಾಗಿರುವ ಮೊಬಲಗು | |
| ಜ) | ಪ್ರಸಕ್ತ ಹೊಣೆಗಾರಿಕೆ | |
| ಜ) | ಕೈಗೊಳ್ಳಲಾಗಿರುವ ವಸೂಲಿಯ ವಿವರಗಳು | |
| ಜಿ) | ಅವರಿಂದ ಒಟಿ ಎಸ್ ನೀಡಿಕೆಯಾಗಿದ್ದಲ್ಲಿ ವಿವರಗಳು | |

26 ಇತ್ಯರ್ಥಕ್ಕೆ ಆಯ್ಕೆಗಳು :

ಪರಿಷ್ಕೃತ ಎಂಸಿಎಆರ್ ಯೋಜನೆಯನ್ವಯ ಒಟಿಎಸ್ ಸೂತ್ರ: (ಮೊಬಲಗು ರೂಪಾಯಿಗಳಲ್ಲಿ)

| | ಪ್ರವರ್ಗ | ಕನಿಷ್ಟ ನಿರ್ಧಾರದ ಮೊಬಲಗು | ಪಾವತಿಸಬೇಕಾಗಿರುವ ಒಟಿಎಸ್ ಮೊಬಲಗು | ತೆಗೆದು ಹಾಕುವುದು | ಮನ್ನಾ ಮಾಡುವುದು |
|---|---|---|---|---|---|
| ಚಿ | ಪ್ರಾಥಮಿಕ ಆಸ್ತಿಗಳ ಮೌಲ್ಯವು ಪಾವತಿಸಬೇಕಾಗಿರುವ ಸರಳ ಬಡ್ಡಿಯ ಮೌಲ್ಯಕ್ಕಿಂತ 2 ಪಟ್ಟು ಜಾಸ್ತಿಯಾಗಿದ್ದಲ್ಲಿ | | | | |
| ಛ | ಭದ್ರತೆಯುಳ್ಳ ಆಸ್ತಿಗಳ ಮೌಲ್ಯ + ಪಿಪಿ ಆಸ್ತಿಗಳ 50% ನಿವ್ವಳ ಮೌಲ್ಯವು ಸರಳಬಡ್ಡಿಯ ಮೇಲೆ ಪಾವತಿಸತಕ್ಕ ಮೌಲ್ಯಕ್ಕಿಂತ ಜಾಸ್ತಿಯಾದಲ್ಲಿ ಮತ್ತು ಮೇಲೆ ತಿಳಿಸಲಾಗಿರುವ '೦' ಗಿಂತ ಕೆಳಗೆ ಬಾರದೇ ಇದ್ದಲ್ಲಿ | | | | |

| | | | |
|---|---|---|---|
| ಛ | ಭದ್ರತೆಯುಳ್ಳ ಆಸ್ತಿಗಳ ಮೌಲ್ಯ + ಪಿಪಿ ಆಸ್ತಿಗಳ 50% ನಿವ್ವಳ ಮೌಲ್ಯವು ಸರಳಬಡ್ಡಿಯ ಮೇಲೆ ಪಾವತಿಸತಕ್ಕ ಮೌಲ್ಯಕ್ಕಿಂತ ಕಡಿಮೆಯಾದಲ್ಲಿ ಮತ್ತು (ಅಸಲು+ಇತರೆ ಬಾಕಿಗಳು)ಗಿಂತ 30% ಜ ಜಾಸ್ತಿಯಾಗಿದ್ದಲ್ಲಿ | | |
| ಜ | ಭದ್ರತೆಯ ಆಸ್ತಿಗಳನ್ನು ಮಾರಾಟ/ನಗದಾಗಿಸಿದ್ದಲ್ಲಿ ಮತ್ತು ಪಿಪಿ ಆಸ್ತಿಯ ನಿವ್ವಳ ಮೌಲ್ಯವು ಸೊನ್ನೆ ಅಥವಾ (ಅಸಲು+ಇತರೆ ಬಾಕಿ)ಗಳಿಗಿಂತ 30% ಗಿಂತ ಕಡಿಮೆಯಾಗಿದ್ದಲ್ಲಿ | | |

*ಟಿಪ್ಪಣಿ:*

**27. ನೀತಿಯಂತೆ ಒಟಿಎಸ್:**

ರೂಪಾಯಿ ಲಕ್ಷಗಳಲ್ಲಿ

| ಆಯ್ಕೆಗಳು | ಪಾವತಿಸಬೇಕಾಗಿರುವ ಒಟಿಎಸ್ ಮೊಬಲಗು | ತೆಗೆದು ಹಾಕಿದ್ದು | ಮನ್ನಾ ಮಾಡಿದ್ದು |
|---|---|---|---|
| **ಒಟಿಎಸ್ ನೀತಿಯಂತೆ ಪಾವತಿಸಿರುವ ಒಟಿಎಸ್ ಮೊಬಲಗು:** ಭದ್ರತೆಯುಳ್ಳ ಆಸ್ತಿಗಳ ಮೌಲ್ಯ + ಪಿಪಿ ಆಸ್ತಿಗಳ 50% ನಿವ್ವಳ ಮೌಲ್ಯವು ಸರಳಬಡ್ಡಿಯ ಮೇಲೆ ಪಾವತಿಸತಕ್ಕ ಮೌಲ್ಯಕ್ಕಿಂತ ಜಾಸ್ತಿಯಾದಲ್ಲಿ ಮತ್ತು ಮೇಲೆ ತಿಳಿಸಲಾಗಿರುವ '೦' ಗಿಂತ ಕೆಳಗೆ ಬಾರದೇ ಇದ್ದಲ್ಲಿ | | | |

- ಮನ್ನಾ ಮಾಡಿರುವ ಮೊಬಲಗು ಕೆಎಸ್ಎಫ್‌ಸಿಗೆ ಮಾತ್ರ ಅನ್ವಯಿಸಲ್ಪಡುತ್ತದೆ.

28. **ಹಿನ್ನೆಲೆ:**

**29. ಪಾವತಿ ತಪ್ಪಲು ಕಾರಣಗಳು :**

ಘಟಕವು ಪಾವತಿ ತಪ್ಪಿಸಲು ಈ ಕೆಳಕಂಡವುಗಳು ಪ್ರಮುಖ ಕಾರಣವಾಗಿರುತ್ತವೆ:

**30. ವಸೂಲಿ ಕ್ರಮಗಳು :**

| |
|---|
| |

**31. ಘಟಕದ ಪ್ರಸಕ್ತ ಸ್ಥಿತಿ :**

| |
|---|
| |

**32. ಪ್ರವರ್ತಕರ ಮನವಿ :**

| |
|---|
| |

**33. ಸದ್ಯದ ಒಟಿಎಸ್ ಪ್ರಸ್ತಾವನೆ :**

| |
|---|
| |

**35. ಇಲಾಖೆಯ ಶಿಫಾರಸ್ಸುಗಳು :**

ಈ ಕೆಳಕಂಡ ಅಂಶಗಳಿಂದ ಪ್ರವರ್ತಕರು/ಮೇಲಾಧಾರ ಭದ್ರತೆಗಳ ಮಾಲೀಕರ ಮನವಿಯನ್ನು ಪರಿಗಣಿಸಬಹುದಾಗಿದೆ.

**ಅನುಬಂಧಗಳ ವಿವರಗಳು**

| ಕ್ರಮ ಸಂಖ್ಯೆ | ವಿವರ | ಅನುಬಂಧ |
|---|---|---|
| 1 | ಮೌಲ್ಯಮಾಪನ ವರದಿ | ಅನುಬಂಧ–ಖ |

***ವ್ಯವಸ್ಥಾಪಕರು* [ವಸೂಲಿ]** **ಉಪ ಪ್ರಧಾನ ವ್ಯವಸ್ಥಾಪಕರು[ವಸೂಲಿ]**

**ಕಾರ್ಯನಿರ್ವಾಹಕ ನಿರ್ದೇಶಕರು – ಪ್ರಭಾರ**

ಅನುಬಂಧ – II

(ಸಹಾಯ ಪಡೆದ/ಸಾಲಗಾರ ಎನ್‌ಪಿಎ ಘಟಕಗಳಿಗೆ ಒಟಿಎಸ್ ಮಾಹಿತಿ ನೀಡುವ ಪತ್ರದ ಕರಡು)

ಮೆ. ____________________________________________..

<u>ಪೂರ್ವಾಗ್ರಹ ಇಲ್ಲದೇ</u>

ಮಾನ್ಯರೇ,

ವಿಷಯ: ನಿಮ್ಮ ಸಾಲದ ಖಾತೆ ನಂ. ______________ರ ಒಂದೇ ಬಾರಿ ಇತ್ಯರ್ಥ (ಒಟಿಎಸ್)

ಉಲ್ಲೇಖ: ಒಟಿಎಸ್ ನೀತಿಯ ಅಡಿಯಲ್ಲಿ ನಿಮ್ಮ ಪತ್ರ ಸಂಖ್ಯೆ _______

ದಿನಾಂಕ : ________________

ಮೇಲೆ ತಿಳಿಸಿರುವ ವಿಷಯಕ್ಕೆ ಸಮಬಂಧಿಸಿದಂತೆ, ಒಟಿಎಸ್‌ಗಾಗಿ ನಿಮ್ಮ ಮನವಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕೆಎಸ್‌ಐಐಡಿಸಿಯಿಂದ ಒಪ್ಪಲ್ಪಟ್ಟಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇವೆ:

(i) ನೀವು ಒಟಿಎಸ್ ಮೊಬಲಗು ರೂ. ________________ನ್ನು (ನೀವು ಈಗಾಗಲೇ ಪಾವತಿಸಿ, ಸಸ್ಪೆನ್ಸ್ ಖಾತೆಯಲ್ಲಿರುವ ಪ್ರಾರಂಭಿಕ ಮೊಬಲಗು ರೂ. __________________ ಸೇರಿ) ಪಾವತಿಸತಕ್ಕದ್ದು. ಇದರೊಂದಿಗೆ ಒಟಿಎಸ್‌ನ ಅಡಿಯಲ್ಲಿ ಕೆಎಸ್‌ಐಐಡಿಸಿಯು ದಿನಾಂಕ _____________ ರಂತೆ ಬಿಟ್ಟುಕೊಟ್ಟಿರುವ ಮೊಬಲಗು ರೂ. ______________.

(ii) ಒಟಿಎಸ್‌ನ ಮೊಬಲಗನ್ನು ಈ ಕೆಳಕಂಡಂತೆ 4 (ನಾಲ್ಕು) ಮಾಸಿಕ ಕಂತುಗಳಲ್ಲಿ ಪಾವತಿಸತಕ್ಕದ್ದು:

(a) ಅನುಮೋದಿಸಲ್ಪಟ್ಟ ಒಟಿಎಸ್‌ನ ಮೊದಲ ಇಪ್ಪತ್ತೈದು ಪ್ರತಿಶತ (25%) ಮೊಬಲಗನ್ನು (ಪ್ರಾರಂಭಿಕ ಡೌನ್ ಪೇಮೆಂಟ್ ಆಗಿ ನೀಡಿರುವ ಮೊಬಲಗನ್ನು ಕಳೆದು) ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 30 ದಿನಗಳ ಒಳಗೆ ಪಾವತಿಸತಕ್ಕದ್ದು,

(b) ಅನುಮೋದಿಸಲ್ಪಟ್ಟ ಒಟಿಎಸ್‌ನ ಎರಡನೇ ಇಪ್ಪತ್ತೈದು ಪ್ರತಿಶತ (25%) ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 60 ದಿನಗಳ ಒಳಗೆ ಪಾವತಿಸತಕ್ಕದ್ದು.

(c) ಅನುಮೋದಿಸಲ್ಪಟ್ಟ ಒಟಿಎಸ್‌ನ ಮೂರನೇ ಇಪ್ಪತ್ತೈದು ಪ್ರತಿಶತ (25%) ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 90 ದಿನಗಳ ಒಳಗೆ ಪಾವತಿಸತಕ್ಕದ್ದು.

(d) ಅನುಮೋದಿಸಲ್ಪಟ್ಟ ಒಟಿಎಸ್‌ನ ನಾಲ್ಕನೇ ಇಪ್ಪತ್ತೈದು ಪ್ರತಿಶತ (25%) ಮೊಬಲಗನ್ನು ಒಟಿಎಸ್ ಬಗ್ಗೆ ಮಾಹಿತಿಯನ್ನು ಕಳುಹಿಸಿದ ದಿನಾಂಕದ 120 ದಿನಗಳ ಒಳಗೆ ಪಾವತಿಸತಕ್ಕದ್ದು.

ಯಾವುದೇ ಕಂತಿನ ಮೊಬಲಗನ್ನು ಪಾವತಿಸಲು ವಿಫಲರಾದ ಪಕ್ಷದಲ್ಲಿ ತಡವಾದ ಅವಧಿಗೆ ವಾರ್ಷಿಕ 9%ನಂತೆ ಸರಳ ಬಡ್ಡಿಯು ಸೇರಲ್ಪಡುತ್ತದೆ. ಮಾಹಿತಿ ನೀಡಿದ 120 ದಿನಗಳ ಒಳಗೆ ಒಟಿಎಸ್ ಮೊಬಲಗನ್ನು ಪಾವತಿಸಲು ವಿಫಲರಾದ ಪಕ್ಷದಲ್ಲಿ ಒಟಿಎಸ್ ಅನುಮೋದನೆಯು ಸ್ವಯಂಚಾಲಿತವಾಗಿ ಹಿಂಪಡೆಯಲ್ಪಡುತ್ತದೆ/ರದ್ದುಗೊಳ್ಳುತ್ತದೆ.

(i) ಈ ನೀತಿಯ ಅಡಿಯಲ್ಲಿ ಒಟಿಎಸ್ ಪರಿಗಣನೆಯ ನಂತರದಲ್ಲಿ ರಾಜ್ಯದ/ಕೇಂದ್ರದ ಸಹಾಯಧನ, ಬಡ್ಡಿ ಸಹಾಯಧನ ವಿಮಾ ಕ್ಲೈಮುಗಳು ಇತ್ಯಾದಿಗಳನ್ನು ಕೆಎಸ್‌ಐಐಡಿಸಿಯು ಪಡೆದಿದ್ದಲ್ಲಿ, ಅಂತಹ ಮೊಬಲಗನ್ನು ಒಟಿಎಸ್ ಅನುಮೋದನೆಯ ಸಮಯದಲ್ಲಿ ಕೆಎಸ್‌ಐಐಡಿಸಿಯು ಬಿಟ್ಟುಕೊಟ್ಟಿರುವ ಮೊಬಲಗಿನ ಭಾಗಕ್ಕೆ ಸರಿಹೊಂದಿಸಲಾಗುವುದು ಮತ್ತು ಏನಾದರೂ ಬಾಕಿ ಉಳಿದಲ್ಲಿ ಮಾತ್ರ ಹಿಂದಿರುಗಿಸಲಾಗುವುದು.

(ii) ದಾವೆ ಹೂಡಿರುವ ಪ್ರಕರಣಗಳಲ್ಲಿ, ನ್ಯಾಯ ತೀರ್ಮಾನ ಬಾಕಿ ಇರುವ ಪ್ರಕರಣಗಳಲ್ಲಿ ಸಂಬಂದಪಟ್ಟ ನ್ಯಾಯಾಲಯದಿಂದ ಒಪ್ಪಿಗೆ/ರಾಜಿ ಆದೇಶ ಪಡೆದು ಈ ನೀತಿಯ ಅಡಿಯಲ್ಲಿ ಖಾತೆಯನ್ನು ಮುಕ್ತಾಯಗೊಳಿಸುವ ಮೊದಲು ಒಪ್ಪಿಸತಕ್ಕದ್ದು.

(iii) ಎನ್‌ಸಿಎಲ್‌ಟಿ ಪ್ರಕರಣಗಳಲ್ಲಿ "ಎನ್‌ಸಿಎಲ್‌ಟಿಯಿಂದ ಅನುಮತಿಯನ್ನು" ಪಡೆದು ಈ ನೀತಿಯ ಅಡಿಯಲ್ಲಿ ಖಾತೆಯನ್ನು ಮುಕ್ತಾಯಗೊಳಿಸುವ ಮೊದಲು ಒಪ್ಪಿಸತಕ್ಕದ್ದು.

(iv) ನೀವು ನೀಡಿರುವ ಮಾಹಿತಿಗಳು ಕೃತಕ ಅಥವಾ ದಾರಿತಪ್ಪಿಸುವಂತಹದ್ದು ಅಥವಾ ಸರಿಯಲ್ಲದ್ದು ಅಥವಾ ನಿಜವಲ್ಲದ್ದು ಎಂದು ನಂತರದಲ್ಲಿ ಕಂಡುಬಂದಲ್ಲಿ ಅಥವಾ ಯಾವುದೇ ಭೌತಿಕ ಮಾಹಿತಿಗಳು ಒಟಿಎಸ್ ತೀರ್ಮಾನದ ಮೇಲೆ ಪರಿಣಾಮ ಬೀರುವಂತಹದ್ದು ಎಂದು ಕಂಡುಬಂದಲ್ಲಿ, ಈ ಒಟಿಎಸ್ ಪ್ಯಾಕೇಜನ್ನು ಹಿಂದೆ ಪಡೆಯುವ ಅಧಿಕಾರವನ್ನು ಕೆಎಸ್‌ಐಐಡಿಸಿಯು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಕೆಎಸ್‌ಐಐಡಿಸಿಯ ತೀರ್ಮಾನವೇ ಅಂತಿಮ ಮತ್ತು ಒಪ್ಪಿಕೊಳ್ಳತಕ್ಕದ್ದು.

(v) ಒಟಿಎಸ್‌ನ ಷರತ್ತುಗಳು ನಿಮಗೆ ತೃಪ್ತಿಯಾಗದಿದ್ದಲ್ಲಿ, ನೀವು ನಿಮಗೆ ಒಟಿಎಸ್ ಬಗ್ಗೆ ಮೊದಲ ಮಾಹಿತಿ ಪಡೆದ 30 ದಿನಗಳ ಒಳಗೆ ಮೇಲ್ಮನವಿ ಅಥವಾ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಉಪ ಪ್ರಧಾನ ವ್ಯವಸ್ಥಾಪಕರು (ವಸೂಲಿ)

## ಅನುಬಂಧ – III

(ರೂ. 100/–ರ ಛಾಪಾ ಕಾಗದದಲ್ಲಿ ಬೆರಳಚ್ಚು ಮಾಡಿಸತಕ್ಕದ್ದು)

ಪ್ರಮಾಣ ಪತ್ರ

ನಾವು:

(1) ಶ್ರೀ/ಶ್ರೀಮತಿ ________________________________________._ಬಿನ್
ಶ್ರೀ ____________________ ವಾಸ ___________________.

(2)

(3)

ಮೆ. ___________________________ರ ಪ್ರವರ್ತಕರು/ಜಾಮೀನುದಾರರು ಆಗಿ ಈ ಮೂಲಕ ಸತ್ಯನಿಷ್ಠೆಯಿಂದ ಘೋಷಿಸಿ ಈ ಕೆಳಕಂಡಂತೆ ಪ್ರಮಾಣ ಮಾಡುವುದು ಏನೆಂದರೆ:

ಮೆ. __________________________.ಒಂದು ಪ್ರೈವೇಟ್ ಲಿಮಿಟೆಡ್ ಕಂಪೆನಿ/ಪಾಲುದಾರಿಕೆ ಸಂಸ್ಥೆಯು (ಇನ್ನು ಮುಂದೆ **"ಸಾಲಗಾರರು"** ಎಂದು ಉಲ್ಲೇಖಿಸಲ್ಪಡುವರು) ಮೆ. ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ದಿ ನಿಗಮ ನಿಯಮಿತದಿಂದ (ಕೆಎಸ್‌ಐಐಡಿಸಿ) ( ಈ ಹಿಂದೆ ಕರ್ನಾಟಕ ರಾಜ್ಯ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ದಿ ನಿಗಮ ನಿಯಮಿತ ಕೆಎಸ್‌ಐಐಡಿಸಿ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು), ನಂ. 49, **"**ಖನಿಜ ಭವನ**"**, ದೇವರಾಜ ಅರಸ್ ರಸ್ತೆ, ಬೆಂಗಳೂರು 560 001 ಇವರಿಂದ ______________________ಇಲ್ಲಿರುವ ಕೈಗಾರಿಕೆಯನ್ನು ಸ್ಥಾಪಿಸಲು/ವಿಸ್ತರಿಸಲು _______________ಸೌಲಭ್ಯವನ್ನು ಪಡೆದುಕೊಂಡಿರುತ್ತೇವೆ. ಕೆಎಸ್‌ಐಐಡಿಸಿಯಿಂದ **ಸಾಲಗಾರರಿಗೆ** ಈ ರೀತಿಯಾಗಿ ಮಂಜೂರಾಗಿರುವ ಸಾಲ ಸೌಲಭ್ಯಕ್ಕೆ ನಾವು ವಯಯಕ್ತಿಕ ಭದ್ರತೆಗಳನ್ನು ಒದಗಿಸಿರುತ್ತೇವೆ.
ಹಲವಾರು ಕಾರಣಗಳಿಂದ, ಸಾಲಗಾರರಿಗೆ ಕೆಎಸ್‌ಐಐಡಿಸಿಯಿಂದ ಪಡೆಯಲಾಗಿರುವ ಸೌಲಭ್ಯದ ಭಾದ್ಯತೆಗಳನ್ನು ಭರಿಸಲು ಸಾಧ್ಯವಾಗಿರುವುದಿಲ್ಲ. ನಾವು, ಸಾಲಗಾರರೊಂದಿಗೆ ಕೆಎಸ್‌ಐಐಡಿಸಿಯನ್ನು ಸಂಪರ್ಕಿಸಿ ಒಟಿಎಸ್ ನೀತಿ ___________ಯ ಅಡಿಯಲ್ಲಿ ಬಾಕಿಗಳನ್ನು ಒಂದೇ ಬಾರಿ ಇತ್ಯರ್ಥಗೊಳಿಸುವ ಬಗ್ಗೆ ಕೇಳಿರುತ್ತೇವೆ. ಒಟಿಎಸ್ ನೀತಿಯಂತೆ ಸಾಲಗಾರರ ಒಟಿಎಸ್ ಪಾವತಿಯನ್ನು ಮಾಡಲು ನಾವು ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತೇವೆ ಮತ್ತು ಅಗತ್ಯವಾದ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಸಲುವಾಗಿ ನಾವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತೇವೆ.
(ಕೈಗೊಂಡಿರುವ ಕ್ರಮಗಳನ್ನು ಇಲ್ಲಿ ನಮೂದಿಸಿ)

1)
2)
3)

(ಅನ್ವಯಿಸದಿದ್ದಲ್ಲಿ ಹೊಡೆದು ಹಾಕಿ)

ನಾವು ಕೆಎಸ್‌ಐಐಡಿಸಿಯೊಂದಿಗೆ ವಾಗ್ದಾನ ಮಾಡುವುದೇನೆಂದರೆ, ಕೆಎಸ್‌ಐಐಡಿಸಿಯ ಸೂಕ್ತ ಪ್ರಾಧಿಕಾರದಿಂದ ವಿಸ್ತರಿಸಲ್ಪಟ್ಟ ಒಟಿಎಸ್ ಸೌಲಭ್ಯವು ಸಾಲಗಾರರಿಗೆ ಒಪ್ಪಿಗೆಯಾದ ಪಕ್ಷದಲ್ಲಿ ನಾವು ಮತ್ತು ಸಾಲಗಾರರು ಕೂಡಾ ಮಂಜೂರಾಗಿರುವ ಅನುಮೋದನೆಯಂತೆ ಒಟಿಎಸ್ ಮೊಬಲಗಿಗೆ ಮುಂದಿನ ದಿನಾಂಕ ನಮೂದಿಸಿರುವ ಚೆಕ್‌ನ್ನು ಒಪ್ಪಿಸುವ ಮೂಲಕ ನಮ್ಮ ಭಾದ್ಯತೆಯನ್ನು ನಿರ್ವಹಿಸುತ್ತೇವ. ಈ ಪ್ರಮಾಣ ಪತ್ರದ ಆಧಾರದ ಮೇಲೆ ಕೆಎಸ್‌ಐಐಡಿಸಿಯು ನಮ್ಮ ಒಟಿಎಸ್ ಮನವಿಯ ಬಗ್ಗೆ ಕ್ರಮ ಕೈಗೊಳ್ಳುತ್ತದೆ ಎಂದು ನಮಗೆ

ಅರ್ಥವಾಗಿರುತ್ತದೆ. ಈ ಅಭಿಪ್ರಾಯದೊಂದಿಗೆ ನಾವು ದಿನಾಂಕ ___________ರಂದು ಪ್ರಮಾಣ ಮಾಡಿ ಘೋಷಣೆ ನೀಡಿರುತ್ತೇವೆ.

ಹೇಳಿಕೆದಾರ

ನನ್ನಿಂದ ಗುರುತಿಸಲ್ಪಟ್ಟಿದೆ

ವಕೀಲರು:

ನನ್ನ ಎದುರು ಪ್ರಮಾಣ ಮಾಡಲ್ಪಟ್ಟಿದೆ

ನೋಟರಿ/ಮ್ಯಾಜಿಸ್ಟ್ರೇಟ್

**ವಿವರಣಾತ್ಮಕ ಟಿಪ್ಪಣಿ:**

**ಕೆಎಸ್ಐಐಡಿಸಿಯೊಂದಿಗೆ ನಿರ್ವಹಿಸಲಾಗಿರುವ ಸಾಲದ ಎಲ್ಲಾ ಕಾನೂನಾತ್ಮಕ ದಾಖಲೆಪತ್ರಗಳಲ್ಲಿ ಪರಿಭಾಷಿಸಲಾಗಿರುವ ಎಲ್ಲಾ ಶಬ್ದಗಳನ್ನೂ ಯಾವುದೇ ಅಂತರಾರ್ಥ ನಿರೂಪಣೆ ಇಲ್ಲದೇ ಇಲ್ಲಿ ಅನ್ವಯಿಸತಕ್ಕದ್ದು. ಆದಾಗ್ಯೂ, ಈ ಒಟಿಎಸ್ ನೀತಿಯ ದಾಖಲೆಪತ್ರಗಳಲ್ಲಿ ವ್ಯಕ್ತಪಡಿಸಲಾಗಿರುವ ಶಬ್ದಗಳನ್ನು ಪ್ರತಿಪಾದಿಸಲು ಮತ್ತು ಸ್ಪಷ್ಟಪಡಿಸುವ ಪ್ರಮುಖ ಉದ್ದೇಶದಿಂದ ಕೆಎಸ್ಐಐಡಿಸಿಯು ಅರ್ಥಗಳನ್ನು ಮತ್ತಷ್ಟು ಸರಳಗೊಳಿಸಿ ಲಗತ್ತಿಸಿದೆ.**

1. **ಸಾಲಗಾರ:** ಸಾಲಗಾರ ಎಂದರೆ ಕೆಎಸ್ಐಐಡಿಸಿಗೆ ಅರ್ಜಿ ಸಲ್ಲಿಸಿದ ಮತ್ತು ಒಂದು ಯೋಜನಾ ಪ್ರಸ್ತಾವನೆಯ ನಿರ್ಧಿಷ್ಟ ಅಗತ್ಯತೆಗಳಿಗೆ ಹಣಕಾಸಿನ ನೆರವನ್ನು ಪಡೆದಿರುವಂತಹ ಮತ್ತು ಕೆಎಸ್ಐಐಡಿಸಿಯೊಂದಿಗೆ ಕಾನೂನಾತ್ಮಕ ಸಾಲದ ದಾಖಲೆಪತ್ರಗಳನ್ನು ನಿರ್ವಹಿಸಿದ/ಸಹಿಮಾಡಿದ ಅರ್ಜಿದಾರ. ಸಾಲದ ಮರುಪಾವತಿಗೆ ಸಾಲಗಾರನು ಕಾನೂನಾತ್ಮಕವಾಗಿ ಜವಾಬ್ದಾರನಾಗಿರುತ್ತಾನೆ ಮತ್ತು ಒಪ್ಪಲ್ಪಟ್ಟ ಸಾಲ ಪಾವತಿ ಷರತ್ತಿನಂತೆ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡದೇ ಇದ್ದಲ್ಲಿ ವಿಧಿಸಬಹುದಾದ ಯಾವುದೇ ರೀತಿಯ ದಂಡಕ್ಕೆ ಒಳಪಟ್ಟಿರುತ್ತಾನೆ. ಸಾಲಗಾರನು ಒಂದು ಪಾಲುದಾರ ಸಂಸ್ಥೆ, ಅಥವಾ ಪ್ರೈವೇಟ್ ಅಥವಾ ಪಬ್ಲಿಕ್ ಲಿಮಿಟೆಡ್ ಕಂಪೆನಿ ಅಥವಾ ಒಂದು ಸೊಸೈಟಿ/ಸಹಕಾರೀ ಸೊಸೈಟಿ ಅಥವಾ ಟ್ರಸ್ಟ್ ಇತ್ಯಾದಿಯೂ ಆಗಿರಬಹುದಾಗಿರುತ್ತದೆ.

2. **ಸಹಕಾರೀ ಸೊಸೈಟಿ:** ಕೋ–ಆಪರೇಟಿವ್ ಸೊಸೈಟಿಯು ಕೋಆಪರೇಟಿವ್ ಸೊಸೈಟಿ ಕಾಯಿದೆ, 1959ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ ಮತ್ತು ಕೋ–ಆಪರೇಟಿವ್ ಸೊಸೈಟಿಯ ರಿಜಿಸ್ಟ್ರಾರ್ ಅವರಿಂದ ನೋಂದಣಿ ಪ್ರಮಾಣಪತ್ರವನ್ನು ಪಡೆದಿರುವಂತಹ ಸಂಸ್ಥೆಯಾಗಿರುತ್ತದೆ.

3. **ಕಂಪೆನಿ – ಪ್ರೈವೇಟ್ ಅಥವಾ ಪಬ್ಲಿಕ್ ಲಿಮಿಟೆಡ್:** ಕಂಪೆನಿಗಳ ಕಾಯಿದೆ, 1956ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ, ಮತ್ತು ಕಾನೂನಿನಂತೆ ಸೃಷ್ಟಿಸಲ್ಪಟ್ಟ ಅವಿರತ ಉತ್ತರಾಧಿಕಾರ ಮತ್ತು ಕಾಮನ್ ಸೀಲ್ ಹೊಂದಿರುವ ಸಂಸ್ಥೆ.

4. **ಮೇಲಾಧಾರ ಭದ್ರತೆ**ಯು ಕೆಎಸ್ಐಐಡಿಸಿಯೊಂದಿಗೆ ನಿರ್ವಹಿಸಲಾಗಿರುವ ಭದ್ರತಾ ಒಪ್ಪಂದ ಪತ್ರದ ಅಡಿಯಲ್ಲಿ ಕೆಎಸ್ಐಐಡಿಸಿಯಿಂದ ಸಾಲ ಪಡೆಯುವ ಸಲುವಾಗಿ ಪ್ರಾಥಮಿಕ ಭದ್ರತೆಯ ಜೊತೆಗೆ ಹೆಚ್ಚುವರಿಯಾಗಿ ಕೊಡಮಾಡಲ್ಪಟ್ಟಿರುವ ಭದ್ರತೆ. ಮೇಲಾಧಾರ ಭದ್ರತೆಯು ಖಾಲಿ ಜಮೀನು, ಮನೆ, ವಸತಿ ಸಮುಚ್ಚಯ, ನಿಶ್ಚಿತ ಠೇವಣಿ ಅಥವಾ ಬ್ಯಾಂಕ್ ಖಾತರಿ/ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರ ಅಥವಾ ಲಿಸ್ಟ್ ಆಗಿರುವ/ಆಗದೇ ಇರುವ ಕಂಪೆನಿಗಳ ಅಡಮಾನವಾಗಿರುವ ಈಕ್ವಿಟಿ ಷೇರುಗಳೂ ಆಗಿರಬಹುದಾಗಿರುತ್ತದೆ. ಸಾಲದ ಶಿಲ್ಕುಗಳ/ಬಾಕಿಗಳ ಇತ್ಯರ್ಥ ಮಾಡುವ ಸಲುವಾಗಿ ಮೇಲಾಧಾರ ಭದ್ರತೆಗಳಿಗೆ ಎದುರಾಗಿ ಮುಂದುವರಿಯಲು ಕೆಎಸ್ಐಐಡಿಸಿಯು ಒಪ್ಪಿಗೆ/ಅಧಿಕಾರ ಹೊಂದಿರುತ್ತದೆ.

5. **ಒಟಿಎಸ್ ಅನುಮೋದನೆಯನ್ನು ತಿಳಿಸುವ ದಿನಾಂಕ**ವು ಒಟಿಎಸ್ ಅರ್ಜಿಯಲ್ಲಿ ಅರ್ಜಿದಾರರು ನೀಡಿರುವ ವಿಳಾಸಕ್ಕೆ ಅಥವಾ ಕೆಎಸ್ಐಐಡಿಸಿಯಲ್ಲಿ ನೋಂದಾಯಿಸಲ್ಪಟ್ಟಿರುವ ಸಂಪರ್ಕ ವಿಳಾಸಕ್ಕೆ ಕೆಎಸ್ಐಐಡಿಸಿಯ ಈ ಅಧಿಆರವುಳ್ಳ ಅಧಿಕಾರಿಯಿಂದ ಕಳುಹಿಸಲ್ಪಟ್ಟ ಒಟಿಎಸ್ ಅನುಮೋದನೆಯಾಗಿರುವ ದಿನಾಂಕ.

6. **ಸಂಶಯಾಸ್ಪದ ಆಸ್ತಿ**ಯು ಕೆಎಸ್ಐಐಡಿಸಿಯು ಹೊರಡಿಸಿರುವ ಸುತ್ತೋಲೆಯಲ್ಲಿ ಅಂಗೀಕರಿಸಲ್ಪಟ್ಟ ಆಸ್ತಿಯ ವರ್ಗೀಕರಣವನ್ನು ತಲುಪುವ ಮತ್ತು ವಿವೇಕಯುತ ನೀತಿಯ ಅಗತ್ಯತೆಗಳಂತೆ ಕೆಎಸ್ಐಐಡಿಸಿಯ ಲೆಕ್ಕದ ಪುಸ್ತಕಗಳಲ್ಲಿ ಅನುಮಾನಾಸ್ಪದವಾದದ್ದೆಂದು ವರ್ಗೀಕರಿಸಲ್ಪಟ್ಟ ಸಾಲದ ಆಸ್ತಿ.

7. **<u>ಪಾವತಿಗೆ ವಾಯಿದೆ ದಿನ:</u>** ಒಟಿಎಸ್ ಮೊಬಲಗಿನ ಪಾವತಿಗಾಗಿ ವಾಯಿದೆಯ ದಿನ(ಗಳ) ಲೆಕ್ಕಾಚಾರವನ್ನು ಒಟಿಎಸ್ ಅನುಮೋದನೆಯ ಮಾಹಿತಿ ತಿಳಿಸುವ ಪತ್ರವನ್ನು ಬಿಡುಗಡೆ ಮಾಡಿರುವ ದಿನಾಂಕವನ್ನೂ ಒಳಗೊಂಡಂತೆ ಆ ದಿನಾಂಕದಿಂದ ಲೆಕ್ಕಹಾಕತಕ್ಕದ್ದು. ಒಟಿಎಸ್ ಅನುಮೋದನಾ ಪತ್ರದಲ್ಲಿ ನಮೂದಿಸಲ್ಪಟ್ಟಿರುವ ಒಟಿಎಸ್ ಮೊಬಲಗಿನ ಪಾವತಿಯ ವೇಳಾಪಟ್ಟಿಯಂತೆ "ವಾಯಿದೆಯ ದಿನ"ವು ಅನ್ವಯಿಸಲ್ಪಡುವುದು. ವಾಯಿದೆಯ ದಿನವು ಭಾನುವಾರ ಅಥವಾ ಕೆಎಸ್ಐಐಡಿಸಿಗೆ ಸಾರ್ವತ್ರಿಕ/ಘೋಷಿಸಲ್ಪಟ್ಟಿರುವ ರಜಾ ದಿನವಾಗಿದ್ದಲ್ಲಿ, ಅದರ ತಕ್ಷಣದ ಹಿಂದಿನ ಕೆಲಸದ ದಿನವು ಪಾವತಿಗೆ ವಾಯಿದೆಯ ದಿನವೆಂದು ಪರಿಗಣಿಸಲ್ಪಡತಕ್ಕದ್ದು.

8. **<u>ಬೇಪಾವತಿಯಾದ ಸಂದರ್ಭದಲ್ಲಿ</u>:** ಒಟಿಎಸ್ ಅನುಮೋದನಾ ಪತ್ರದಲ್ಲಿ ನಿಗಧಿಪಡಿಸಿರುವ_ವೇಳಾಪಟ್ಟಿಯ ಪಾವತಿ ವಾಯಿದೆಯ ದಿನದ ಒಳಗೆ ಒಟಿಎಸ್ ಕಂತನ್ನು ಪಾವತಿಸದೇ ಇರುವ ಸಂದರ್ಭದಲ್ಲಿ ಬೇಪಾವತಿ ನಡೆದಿದೆ ಎಂದು ತಿಳಿಯತಕ್ಕದ್ದು. ಇದೇರೀತಿ, ತಡವಾಗಿರುವ ಒಟಿಎಸ್ ಕಂತಿನ ಮೇಲಿನ ಬಡ್ಡಿಯನ್ನು ತಡವಾದ ಅವಧಿಯ ಕಂತಿನೊಂದಿಗೆ ಪಾವತಿಸದೇ ಇದ್ದಲ್ಲಿ ಬಡ್ಡಿ ಪಾವತಿಯಲ್ಲಿ ಬೇಪಾವತಿ ನಡೆದಿದೆ ಎಂದು ಭಾವಿಸತಕ್ಕದ್ದು. ಮೇಲೆ ಬೇಪಾವತಿಯ ಬಗ್ಗೆ ವಿವರಿಸಿರುವ ರೀತಿಯಲ್ಲಿ ಒಟಿಎಸ್ ಅನುಮೋದನೆಯ ದಿನಾಂಕದ ಆಧಾರದ ಮೇಲೆ ಬೇಪಾವತಿ ಅವಧಿಯನ್ನು ಲೆಕ್ಕಹಾಕತಕ್ಕದ್ದು.

9. **<u>ಜಪ್ತಿ ಮಾರಾಟ</u>**ವು, ಯಾವುದೇ ಆಸ್ತಿ, ಸ್ಟಾಕ್ ಅಥವಾ ಯಾವುದೇ ಆಸ್ತಿಯನ್ನು ಜರೂರು ಆಧಾರದ ಮೇಲೆ ಮಾರಾಟ ಮಾಡುವ ಸನ್ನಿವೇಶವಾಗಿರುತ್ತದೆ. ಆಸ್ತಿಯಲ್ಲಿ ತೊಡಗಿಸಲ್ಪಟ್ಟಿರುವ ಮೊಬಲಗನ್ನು ಅತೀ ಕಡಿಮೆ ಅವಧಿಯಲ್ಲಿ ನಗದಾಗಿಸಬೇಕಾಗಿರುವುದರಿಂದ ಸಾಮಾನ್ಯವಾಗಿ ಜಪ್ತಿ ಮಾರಾಟವು ನಷ್ಟದಲ್ಲಿ ನಡೆದಿರುತ್ತದೆ. ಅಂದರೆ, ಅನಾನುಕೂಲಕರ ಪರಿಸ್ಥಿತಿಗಳಲ್ಲಿ ಮಾರಲೇಬೇಕಾದ ಅನಿವಾರ್ಯತೆಯಲ್ಲಿ ಮಾರಾಟಗಾರನ ಮೇಲೇ ಆಗುವ ದುಷ್ಪರಿಣಾಮ.

10. **<u>ಮಾರ್ಗದರ್ಶಿ ಮೌಲ್ಯ</u>**ವು ಸ್ಥಳೀಯ ಸರ್ಕಾರದಂತೆ ಆಸ್ತಿಯ ಮೌಲ್ಯವಲ್ಲದೇ ಬೇರೇನೂ ಅಲ್ಲ.

11. **<u>ಮಾರುಕಟ್ಟೆ ಮೌಲ್ಯ:</u>** ಖರೀದಿದಾರನು ಪಾವತಿಸಬಹುದು ಎಂದು ನಿರೀಕ್ಷಿಸಲಾಗಿರುವ ಗರಿಷ್ಟ ಅಂದಾಜು ಬೆಲೆ ಮತ್ತು ಮಾರಾಟಗಾರನು ವಸ್ತುವೊಂದಕ್ಕೆ ತೆರೆದ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಸ್ವೀಕರಿಸಲು ಪರಿಗಣಿಸುವ ಬೆಲೆ.

12. **<u>ಗೋಯಿಂಗ್ ಕನ್‌ಸರ್ನ್:</u>** ನಿರ್ವಹಣೆಯನ್ನು ಮುಂದುವರಿಸಿರುವ ಸಂಸ್ಥೆ ಮತ್ತು ತನ್ನ ವ್ಯವಹಾರದ ಮಟ್ಟವನ್ನು ಭೌತಿಕವಾಗಿ ಮೊಟಕು ಮಾಡುವ ಅಥವಾ ಸಮಾಪನ ಮಾಡುವ ಉದ್ದೇಶ ಅಥವಾ ಅಗತ್ಯತೆ ಇಲ್ಲದೇ ಇರುವ ಸಂಸ್ಥೆ.

13. **<u>ಜಾಮೀನುದಾರ:</u>** ಕೆಎಸ್ಐಐಡಿಸಿಯೊಂದಿಗೆ ಆತ/ಆಕೆ ಮಾಡಿಕೊಂಡಿರುವ ಜಾಮೀನು ಕರಾರು ಪತ್ರದಂತೆ ಸಾಲದ ನ್ಯಾಯಯುತ ಮರುಪಾವತಿಗೆ ಬದ್ಧನಾಗಿರುವ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ. ಇದರಲ್ಲಿ, ಬಡ್ಡಿ, ಹೆಚ್ಚಿಸಲ್ಪಟ್ಟ ಬಡ್ಡಿ, ಚಕ್ರ ಬಡ್ಡಿ, ಹೆಚ್ಚುವರಿ ಬಡ್ಡಿ, ಪೂರ್ವ ಪಾವತಿ ಅಥವಾ ಬಿಡುಗಡೆಗೆ ಉತ್ತೇಜಕ ಸಂಭಾವನೆ, ಕಮಿಷನ್ ದರ ಶುಲ್ಕಗಳು ಅಥವಾ ಕೆಎಸ್ಐಐಡಿಸಿ ಮತ್ತು ಎರವಲುಗಾರ/ಸಾಲಗಾರರ ನಡುವೆ ಪರಸ್ಪರ ಒಪ್ಪಿಗೆಯ ಮೇಲೆ ಸಹಿಮಾಡಿರುವ ಸಾಲ ಒಪ್ಪಂದಪತ್ರದಂತೆ ಪಾವತಿಸಬೇಕಾಗಿರುವ ಯಾವುದೇ ಮೊಬಲಗೂ ಒಳಗೊಂಡಿರಬಹುದಾಗಿರುತ್ತದೆ. ಎರವಲುದಾರ/ಸಾಲಗಾರನು ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿಸದೇ ಇದ್ದಲ್ಲಿ, ಅವನು/ಅವಳು ಒಪ್ಪಿಕೊಂಡಿರುವ ಜಾಮೀನು ಭಾಧ್ಯತೆಯನ್ನು ಪೂರ್ತಿಗೊಳಿಸಲು ಜಾಮೀನುದಾರನು ಬದ್ಧನಾಗಿರುತ್ತಾನೆ.

14. **<u>ಒಟಿಎಸ್ ನೀತಿಯಲ್ಲಿ ಶಿರೋನಾಮೆ/ಟಿಪ್ಪಣಿಗಳು/ವಿವರಣಾತ್ಮಕ ಟಿಪ್ಪಣಿಗಳು:</u>** ಕಂಡಿಕೆಗಳು ಮತ್ತು ಅಡಿಬರಹಗಳು ಉಲ್ಲೇಖಕ್ಕಾಗಿ ಮಾತ್ರ ಮತ್ತು ಇವುಗಳು ಒಟಿಎಸ್ ನೀತಿಯ ಉಪಬಂಧಗಳ ರಚನೆಯನ್ನು ಬದಲಿಸತಕ್ಕದ್ದಲ್ಲ ಎಂದು ಪರಿಗಣಿಸತಕ್ಕದ್ದು.

15. **<u>ಒಟಿಎಸ್ ಮೊಬಲಗನ್ನು ಪಾವತಿಸಲು ಅಸಮರ್ಥತೆ:</u>** ಒಟಿಎಸ್ ಅನುಮೋದನೆಯು ಚಾಲ್ತಿಯಲ್ಲಿರುವ ಯಾವುದೇ ಸಮಯದಲ್ಲಿ ಒಟಿಎಸ್ ಅರ್ಜಿದಾರರು ಸ್ವಯಂಪ್ರೇರಣೆಯಿಂದ ಅಥವಾ ಸ್ವಯಂಪ್ರೇರಣೆ ಇಲ್ಲದೇ ದಿವಾಳಿಯಾಗುವ ಅಥವಾ ಪಾಪರ್ ಕಾನೂನಿನ ಪ್ರಕ್ರಿಯೆಗೆ ಒಳಪಡುವಂತಹ ಸಮರ್ಥನೀಯವಾದಂತಹ ಆತಂಕ ಕಂಡುಬಂದಲ್ಲಿ ಕೂಡಾ ಅಂತಹ ಘಟನೆಯನ್ನೂ ಸಹ ಸಾಲದ ಕಂತು ತಪ್ಪಿಸುವಿಕೆಯೆಂದು ಪರಿಗಣಿಸಲ್ಪಡುವುದು.

16. **<u>ಸಾಲ ಕೊಡುವವ/ಕೆಎಸ್ಐಐಡಿಸಿ:</u>** ಅಂದರೆ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಕೆಎಸ್ಐಐಡಿಸಿ ನಿಯಮಿತ (ಕೆಎಸ್ಐಐಡಿಸಿ – ಈ ಹಿಂದೆ ಕರ್ನಾಟಕ ರಾಜ್ಯ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಕೆಎಸ್ಐಐಡಿಸಿ ನಿಯಮಿತ ಎಂದು ಕರೆಯಲ್ಪಡುತ್ತಿತ್ತು).

17. **<u>ಸಾಲ:</u>** ಕೆಎಸ್ಐಐಡಿಸಿಯು ಎರವಲುಗಾರನಿಗೆ/ಸಾಲಗಾರನಿಗೆ ಹಣ ನೀಡುವ ಒಂದು ವ್ಯವಸ್ಥೆಯಾಗಿರುತ್ತದೆ ಮತ್ತು ಎರವಲುಗಾರನು/ಸಾಲಗಾರನು ಮೊಬಲಗನ್ನು ಸಾಮಾನ್ಯವಾಗಿ ಬಡ್ಡಿಯೊಂದಿಗೆ ಹೆಚ್ಚಿಸಲ್ಪಟ್ಟ ಬಡ್ಡಿ, ಚಕ್ರ ಬಡ್ಡಿ, ಹೆಚ್ಚುವರಿ ಬಡ್ಡಿ, ಪೂರ್ವ ಪಾವತಿ ಅಥವಾ ಬಿಡುಗಡೆಗೆ ಉತ್ತೇಜಕ ಸಂಭಾವನೆ, ಕಮಿಷನ್ ದರ ಶುಲ್ಕಗಳು ಅಥವಾ ಕೆಎಸ್ಐಐಡಿಸಿ ಮತ್ತು ಎರವಲುಗಾರ/ಸಾಲಗಾರರ ನಡುವೆ ಪರಸ್ಪರ ಒಪ್ಪಿಗೆಯ ಮೇಲೆ ಸಹಿಮಾಡಿರುವ ಸಾಲ ಒಪ್ಪಂದಪತ್ರದಂತೆ ಪಾವತಿಸಬೇಕಾಗಿರುವ ಯಾವುದೇ ಮೊಬಲಗೂ ಒಳಗೊಂಡಿರುವಂತೆ ಭವಿಷ್ಯದಲ್ಲಿ ಯಾವುದೇ ಒಂದು ಸಮಯದಲ್ಲಿ ಮರುಪಾವತಿ ಮಾಡಲು ಒಪ್ಪಿಕೊಂಡಿರುವುದು. ಸಾಮಾನ್ಯವಾಗಿ, ಸಾಲ ಮರುಪಾವತಿಗೆ ಒಂದು ಪೂರ್ವ ನಿಯೋಜಿತ ಸಮಯ ಇರುತ್ತದೆ.

18. **<u>ಸಾಲದ ಬಾಕಿ</u>**: ಇದು, ಕೆಎಸ್ಐಐಡಿಸಿ ಮತ್ತು ಸಾಲಗಾರರು ಒಪ್ಪಿ ಸಹಿಮಾಡಿರುವ ಸಾಲ ಒಪ್ಪಂದ ಪತ್ರದ ಅಡಿಯಲ್ಲಿ ಕೆಎಸ್ಐಐಡಿಸಿಯು ಎರವಲುಗಾರರಿಗೆ/ಸಾಲಗಾರರಿಗೆ ಸಾಲವಾಗಿ ವಿತರಿಸಿರುವ ಮೊಬಲಗು ಆಗಿದ್ದು, ಮತ್ತು ವಿತರಿಸಲಾಗಿರುವ ಅಸಲನ್ನು ಮಾತ್ರ ಸಾಲಗಾರರು ತಿಳಿಸುತ್ತಿದ್ದು, ಒಂದು ನಿರ್ಧಿಷ್ಟ ದಿನಾಂಕದಂದು ಬಾಕಿ ನಿಂತಿರುವ ಅಸಲನ್ನು ಮಾತ್ರ ಪ್ರತಿನಿಧಿಸುತ್ತಿದ್ದು, ಯಾವುದೇ ಬಡ್ಡಿಯ ಅಂಶವನ್ನು ಒಳಗೊಂಡಿರುವುದಿಲ್ಲ.

19. **<u>ಸಾಲಗಾರ</u>**: ಕೆಎಸ್ಐಐಡಿಸಿಗೆ ಅರ್ಜಿ ಸಲ್ಲಿಸಿ, ನಿರ್ಧಿಷ್ಟ ಅಗತ್ಯತೆಗಳನ್ನು ಪೂರೈಸಿ, ಕೆಎಸ್ಐಐಡಿಸಿಯಿಂದ ಹಣಕಾಸಿನ ಸಹಾಯ/ಸಾಲ ಪಡೆದ ಅರ್ಜಿದಾರರನ್ನು **“**ಸಾಲಗಾರ**”** ಎಂದು ಕರೆಯಲಾಗುತ್ತದೆ. ಸಾಲಗಾರ ಎಂದರೆ ಕೆಎಸ್ಐಐಡಿಸಿಯೊಂದಿಗೆ ಸಾಲದ ಒಪ್ಪಂದ ಪತ್ರಕ್ಕೆ ಒಳಪಟ್ಟಿದ್ದು, ಕಾನೂನಾತ್ಮಕವಾಗಿ ಸಾಲದ ಮರುಪಾವತಿಗೆ ಜವಾಬ್ದಾರನಾಗಿದ್ದು ಮತ್ತು ಪರಸ್ಪರ ಒಪ್ಪಿಕೊಂಡಿರುವ ಸಾಲದ ಷರತ್ತಿನಂತೆ ಸಾಲವನ್ನು ಹಿಂದಕ್ಕೆ ಮರುಪಾವತಿಸದೇ ಇರುವ ಪ್ರಕರಣಗಳಲ್ಲಿ ಯಾವುದೇ ರೀತಿಯ ದಂಡಕ್ಕೆ ಒಳಗಾಗುವ ಅರ್ಜಿದಾರ ಎರವಲುಗಾರನೇ ಆಗಿರುತ್ತಾನೆ.

20. **<u>ದುರ್ಬಳಕೆ</u>**: ಇದು ಕಾನೂನಾತ್ಮಕವಾಗಿಯೂ ಅಥವಾ ನೈತಿಕವಾಗಿಯೂ ಮಾಡಲು ಅಧಿಕಾರ ಇಲ್ಲದಿದ್ದರೂ ಉದ್ದೇಶಪೂರ್ವಕವಾಗಿ ತಪ್ಪನ್ನು ಎಸಗುವ ಕ್ರಿಯೆ ಆಗಿರುತ್ತದೆ. ಇದರಲ್ಲಿ ಯಾವಾಗಲೂ ಅಪ್ರಾಮಾಣಿಕತೆ, ಕಾನೂನು ಬಾಹಿರತೆ ಅಥವಾ ಅಸಮರ್ಪಕ ಕಾರಣಗಳಿಗೆ ಉದ್ದೇಶಪೂರ್ವಕವಾಗಿ ಕೆಎಸ್ಐಐಡಿಸಿಗೆ ಮೋಸ ಮಾಡುವ ಉದ್ದೇಶದಿಂದಲೇ ಅಧಿಕಾರವನ್ನು ಮೀರುವ ಕ್ರಿಯೆಯೂ ಆಗಿರುತ್ತದೆ.

21. **<u>ದಾರಿ ತಪ್ಪಿಸುವ ಮಾಹಿತಿಗಳು</u>**: ಎರವಲುದಾರ/ಸಾಲಗಾರ/ಜಾಮೀನುದಾರ ಒಟಿಎಸ್ ಅರ್ಜಿಯಲ್ಲಿ ಅಥವಾ ಯಾವುದೇ ಸಮರ್ಥನಾ ದಾಖಲೆಪತ್ರಗಳು ಅಥವಾ ಅಂತಹ ಯಾವುದೇ ರೀತಿಯ ದಾಖಲೆಪತ್ರಗಳು/ಪ್ರಮಾಣಪತ್ರಗಳು ಇತ್ಯಾದಿಗಳಲ್ಲಿ ಒದಗಿಸಿರುವ ಯಾವುದೇ ಮಾಹಿತಿಗಳು/ವಿವರಗಳು ಸುಳ್ಳಾಗಿರುವುದು ಅಥವಾ ದಾರಿತಪ್ಪಿಸುವಂತಹದ್ದಾಗಿದ್ದಲ್ಲಿ ಆಗ ಅದನ್ನು ಒಟಿಎಸ್‌ನ ಅಡಿಯಲ್ಲಿ ಪರಿಹಾರವನ್ನು ಮತ್ತು ರಿಯಾಯತಿಗಳನ್ನು ಪಡೆಯುವ ಸಲುವಾಗಿಯೇ ಉದ್ದೇಶಪೂರ್ವಕವಾಗಿ ಎಸಗಿರುವ ಕರ್ತವ್ಯಲೋಪ ಎಂದು ಪರಿಗಣಿಸಲ್ಪಡುವುದು.

22. **<u>ಪ್ರಸಕ್ತ ನಿವ್ವಳ ಮೌಲ್ಯ:</u>** ಪ್ರಸಕ್ತ ನಿವ್ವಳ ಮೌಲ್ಯವನ್ನು ಭವಿಷ್ಯದಲ್ಲಿ ಒಳಬರುವ ನಗದಿನ ಈಗಿನ ಮೌಲ್ಯ ಎಂದು ವಿವರಿಸಲಾಗಿದೆ.

23. **<u>ಕೈಗೂಡಬಹುದಾದ ನಿವ್ವಳ ಮೌಲ್ಯ:</u>** ಆಸ್ತಿಯನ್ನು ದೀರ್ಘ ಸಮಯದವರೆಗೆ ಹಿಡಿದಿಟ್ಟುಕೊಳ್ಳಬಹುದಾದ ಮತ್ತು ಯಾವುದೇ ಒಂದು ಭವಿಷ್ಯದ ದಿನಾಂಕದಂದು ಮಾರಾಟ ಮಾಡಬಹುದೆಂಬ ಊಹೆಯೊಂದಿಗೆ ಒತ್ತು ಕೊಡಲ್ಪಟ್ಟಿರುವ ಆಸ್ತಿಯ ಈಗಿನ ಮೌಲ್ಯವನ್ನು ಗುರುತಿಸುವ ಪದ್ಧತಿಯಾಗಿರುತ್ತದೆ. ಕೈಗೂಡಬಹುದಾದ ನಿವ್ವಳ ಮೌಲ್ಯವು ಕಂಡುಹಿಡಿಯಲಾಗಿರುವ ಅಥವಾ ಲೆಕ್ಕಹಾಕಲಾಗಿರುವ ಕೈಗೂಡಬಹುದಾದ ಯಾವುದೇ ಮೌಲ್ಯವು ಆಸ್ತಿಯ (ಮತ್ತು/ಅಥವಾ ಸಾಲ) ಪ್ರಸಕ್ತ ಮೌಲ್ಯವನ್ನು ಯಾವುದೇ ಒಂದು ಸಮಯದ ಅವಧಿಯಲ್ಲಿ ಪ್ರತಿನಿಧಿಸಲ್ಪಡುವ ಮೌಲ್ಯವೇ ಕೈಗೂಡಬಹುದಾದ ನಿವ್ವಳ ಮೌಲ್ಯವಾಗಿರುತ್ತದೆ. ಸಾಲದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಲವು ಹಿಂದಿನಿಂದ ಬಾಕಿನಿಂತ ನಂತರ ಲೆಕ್ಕಹಾಕಲಾಗಿರುವ ಮೌಲ್ಯವಾಗಿರುತ್ತದೆ.

24. **<u>ನೆಟ್‌ವರ್ಥ್</u>**: ಸಾಲಗಾರರ/ಜಾಮೀನುದಾರರ ಎಲ್ಲಾ ವಾಸ್ತವ ಆಸ್ತಿಗಳಲ್ಲಿ (ಕೆಎಸ್ಐಐಡಿಸಿಯಿಂದ ಸಾಲವನ್ನು ಪಡೆಯುವ ಸಮಯದಲ್ಲಿ ಘೋಷಿಸಲಾಗಿರುವ ವಾಸದ/ವಾಣಿಜ್ಯ/ಬೇಸಾಯದ ನಿವೇಶನ ಅಥವಾ ಜಮೀನನ್ನು ಒಳಗೊಂಡಿರುವ ಸ್ಥಿರ ಆಸ್ತಿಗಳು ಮತ್ತು ನಗದು, ಕಾರುಗಳು, ಆಭರಣ ಇತ್ಯಾದಿಗಳಂತಹ ಚರ ಆಸ್ತಿಗಳು ಮತ್ತು/ಅಥವಾ ಪ್ರಮಾಣ ಪತ್ರದ ಮೂಲಕ ಅಥವಾ ಒಂದು ಹೇಳಿಕೆಯ ಮೂಲಕ ಅಥವಾ ಇನ್ಯಾವುದೇ ರೀತಿಯಲ್ಲಿ ಯಾವುದೇ ಸಮಯದಲ್ಲಿ ಪರಿಶೀಲನೆಯ ನಂತರ ಕೆಎಸ್ಐಐಡಿಸಿಯು ನಿರ್ಧರಿಸಿರುವ ಮೌಲ್ಯವೂ ಸೇರಿ) ದಾಖಲಾತಿಗಳ ಪುರಾವೆಯ ಸಾಕ್ಷಿಯೊಂದಿಗೆ ವಾಸ್ತವ ಆಸ್ತಿಗಳ ಮೇಲೆ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೇಲೆ ಭದ್ರತೆಯುಳ್ಳ ಹೊಣೆಗಾರಿಕೆಯನ್ನು ಕಳೆದರೆ ನೆಟ್‌ವರ್ಥ್ ಮೌಲ್ಯವಾಗುತ್ತದೆ.

25. **<u>ಎನ್‌ಪಿಎ ಸಹಾಯ ಪಡೆದ ಘಟಕ:</u>** ಕೆಎಸ್ಐಐಡಿಸಿ ಮತ್ತು ಸಾಲಗಾರರ ನಡುವೆ ಸಹಿ ಮಾಡಲ್ಪಟ್ಟ ನಿಗದಿತ ಸಾಲಪತ್ರ/ಗಳ ಭಾಗವಾಗಿರುವ ಸಾಲ ಮರುಪಾವತಿ ವೇಳಾಪಟ್ಟಿಯಂತೆ ಸಾಲವನ್ನು ಬಡ್ಡಿಯೊಂದಿಗೆ ಮತ್ತಿತರ ಬಾಕಿಗಳನ್ನು ಮರುಪಾವತಿ ಮಾಡುವಲ್ಲಿ ಸುಸ್ತಿದಾರರಾಗಿರುವ ಅದೇ ಎರವಲುಗಾರ/ಸಾಲಗಾರನೇ ಎನ್‌ಪಿಎ ಸಹಾಯ ಪಡೆದ ಘಟಕವಾಗಿರುತ್ತದೆ ಮತ್ತು ಕೆಎಸ್ಐಐಡಿಸಿಯು ಅನುಸರಿಸುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ವಿವೇಕಯುತ ಮಾನದಂಡದಂತೆ ಆದಾಯ ಗುರುತಿಸುವಿಕೆಯ ಆಧಾರದ ಮೇಲೆ ಕೆಎಸ್ಐಐಡಿಸಿಯ ಲೆಕ್ಕಪತ್ರಗಳಲ್ಲಿ ಸಾಲಗಾರನ ಸಾಲದ ಖಾತೆಯನ್ನು ದಿನಾಂಕ 31.3.2011ರಲ್ಲಿರುವಂತೆ **"**ನಿರ್ವಹಿಸದೇ ಇರುವ ಆಸ್ತಿ**"** ಎಂದು ವರ್ಗೀಕರಿಸಲಾಗಿರುವುದು.

26. **<u>ನಿರ್ವಹಿಸದೇ ಇರುವ ಆಸ್ತಿ</u>**: ಕೆಎಸ್ಐಐಡಿಸಿಯು ಹೊರಡಿಸಿರುವ ಸುತ್ತೋಲೆಗಳಲ್ಲಿ ವಿವರಿಸಿರುವಂತೆ ಎರವಲುಗಾರ/ಸಾಲಗಾರನು ಹಿಂದೆ ಒಪ್ಪಲ್ಪಟ್ಟ ಬಡ್ಡಿಯನ್ನು ಮತ್ತು/ಅಥವಾ ಸಾಲದ ಅಸಲು ಮೊಬಲಗನ್ನು

90 ದಿನಗಳಿಗಿಂತ ಹೆಚ್ಚಿನ ಅವಧಿಗೆ ಕೆಎಸ್ಐಐಡಿಸಿಗೆ ಪಾವತಿಸದೇ ಇರುವುದನ್ನು ಎನ್‌ಪಿಎ ಎಂದೂ ತಿಳಿಯಲ್ಪಟ್ಟಿರುತ್ತದೆ.

27. **ಇತರೆ ಬಾಕಿಗಳು (ಒಡಿ):** ಮಂಜೂರಾಗಿರುವ ಸಾಲಕ್ಕೆ ಭದ್ರತೆಯಾಗಿರುವ ಸಾಲಗಾರನ ಖಾತೆಯನ್ನು ನಿರ್ವಹಿಸಲು, ಅವನ ಆಸ್ತಿಯನ್ನು ರಕ್ಷಿಸುವುದಕ್ಕೆ ಸಂಬಂಧಿಸಿದಂತೆ ಸಾಲಗಾರರ ಪರವಾಗಿ ಕೆಎಸ್ಐಐಡಿಸಿಯು ಭರಿಸಿರುವ ನೇರ ವೆಚ್ಚಗಳಾಗಿರುತ್ತವೆ. ಒಡಿಯನ್ನು ಮೊದಲಿಗೆ ಪಾವತಿಸಲು/ವಸೂಲಿ ಮಾಡಬೇಕಾಗಿರುತ್ತವೆ ಮತ್ತು ಇದು ಒಟಿಎಸ್ ಮೊಬಲಗಿಗೆ ಅತಿರಿಕ್ತವಾಗಿರುತ್ತದೆ.

28. **ಅವಧಿ ಮೀರಿದ್ದು:** ನಿಗಧಿಪಡಿಸಲ್ಪಟ್ಟು ಮಾಹಿತಿ ತಿಳಿಸಲಾಗಿರುವ ವೇಳಾಪಟ್ಟಿಯಂತೆ ಪಾವತಿಸದೇ ಇರುವ ಹಾಗೂ ನಿಗಧಿತ ಅವಧಿಯ ಒಳಗೆ ಪಾವತಿಸಲ್ಪಡದೇ ಇರುವ ಯಾವುದೇ ಸಾಲಸೌಲಭ್ಯದ ಅಡಿಯಲ್ಲಿ ಕೆಎಸ್ಐಐಡಿಸಿಗೆ ಬಾಕಿ ಇರುವುದು **'ಅವಧಿ ಮೀರಿದ'** ಸಾಲವಾಗಿರುತ್ತದೆ.

29. **ಪಾಲುದಾರಿಕೆ ಸಂಸ್ಥೆ:** ನೋಂದಾಯಿಸಲ್ಪಟ್ಟಿರುವ ಸಾಲದ ಒಪ್ಪಂದ ಪತ್ರ/ದಾಖಲೆ ಪತ್ರದಂತೆ ಕೆಎಸ್ಐಐಡಿಸಿಯಿಂದ ಗುರುತಿಸಿಸಲ್ಪಟ್ಟು ಎಲ್ಲರಿಂದಲೂ ನಡೆಸಿಕೊಂಡು ಹೋಗುತ್ತಿರುವ ಅಥವಾ ಎಲ್ಲರ ಪರವಾಗಿ ಒಬ್ಬರಿಂದಲೇ ನಡೆಸಿಕೊಂಡು ಹೋಗುತ್ತಿರುವ ವ್ಯವಹಾರದ ಲಾಭವನ್ನು ಹಂಚಿಕೊಂಡು ಹೋಗಲು ಒಪ್ಪಿಕೊಂಡಿರುವ ಕನಿಷ್ಟ ಇಬ್ಬರು ವಯಸ್ಕ ವ್ಯಕ್ತಿಗಳ ನಡುವಿನ ಸಂಬಂಧದ ಸಂಸ್ಥೆಯಾಗಿರುತ್ತದೆ. ಪಾಲುದಾರಿಕೆ ಒಪ್ಪಂದ ಪತ್ರದೊಂದಿಗೆ ಅಥವಾ ಇಲ್ಲದೆಯೂ ಈ ರೀತಿ ಒಟ್ಟಾಗಿ ಬರುವ ವ್ಯಕ್ತಿಗಳು ಪಾಲುದಾರರು ಎಂದು ಕರೆಯಲ್ಪಡುವರು.

30. **ವಾಯಿದೆಯ ದಿನಾಂಕದಂದು ಪಾವತಿ:** ವಾಯಿದೆಯ ದಿನಾಂಕದಂದು ಸ್ಥಳೀಯ ಚೆಕ್‌ಗಳ ಮೂಲಕ, ಸ್ಥಳೀಯ ಡ್ರಾಫ್ಟ್/ಸ್ಥಳೀಯ ಬ್ಯಾಂಕರ್ಸ್ ಚೆಕ್/ಸ್ಥಳೀಯ ಪಾವತಿ ಆದೇಶ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮಾಡಲಾದ ಪಾವತಿಯನ್ನು ವಾಯಿದೆಯ ದಿನಾಂಕದಂದು ಮಾಡಲ್ಪಟ್ಟ ಪಾವತಿಯೆಂದು ಪರಿಗಣಿಸಿ ಸ್ವೀಕರಿಸಬಹುದಾಗಿರುತ್ತದೆ.

31. **ಒಟಿಎಸ್ ಮೊಬಲಗಿನ ಪಾವತಿಯ ರೀತಿ ಮತ್ತು ಸ್ಥಳ:** ಒಟಿಎಸ್ ನೀತಿಯ ಅಡಿಯಲ್ಲಿ ಎರವಲುಗಾರ/ಸಾಲಗಾರರು ಪಾವತಿಸುವ ಎಲ್ಲಾ ಹಣಗಳನ್ನು ಕೆಎಸ್ಐಐಡಿಸಿಯು ಎರವಲುಗಾರ/ಸಾಲಗಾರನಿಗೆ ನಿರ್ಧಿಷ್ಟಪಡಿಸುವಂತಹ ಕೆಎಸ್ಐಐಡಿಸಿಯ ನೋಂದಾಯಿತ ಕಛೇರಿಯಲ್ಲಿಯೇ ಪಾವತಿಸತಕ್ಕದ್ದು. ಪಾವತಿಯ ರೀತಿಯು ಚೆಕ್/ಡಿಮಾಂಡ್ ಡ್ರಾಫ್ಟ್/ಪೇ ಆರ್ಡರ್/ಎನ್‌ಇಎಫ್‌ಟಿ ಅಥವಾ ಆರ್‌ಟಿಜಿಎಸ್ ರೀತಿಯಲ್ಲಿರಬಹುದಾಗಿರುತ್ತದೆ. ಪರಸ್ಥಳದ ಚೆಕ್/ಗಳನ್ನು ನಗದಾದ ನಂತರ ಸಂಬಂಧಿತ ಬ್ಯಾಂಕಿಗೆ ಚಾರ್ಜ್ ಮಾಡಲಾಗುವುದು ಮತ್ತು ಕೆಎಸ್ಐಐಡಿಸಿಗೆ ಪಾವತಿಸಬೇಕಾಗಿರುವ ಒಟಿಎಸ್ ಅಥವಾ ಕೆಎಸ್ಐಐಡಿಸಿಗೆ ಬಾಕಿ ಇದ್ದು ಪಾವತಿಸಬೇಕಾಗಿರುವ ಬೇರೆ ಯಾವುದೇ ಮೊಬಲಗಿಗೆ ಅತಿರಿಕ್ತವಾಗಿ ಕೆಎಸ್ಐಐಡಿಸಿಯ ವಸೂಲಿ ಶುಲ್ಕವನ್ನು ಎರವಲುಗಾರ/ಸಾಲಗಾರನು ಪಾವತಿಸತಕ್ಕದ್ದು.

32. **ಪ್ರಾಥಮಿಕ ಭದ್ರತೆ:** ಎರವಲುದಾರ/ಸಾಲಗಾರನು ಕೆಎಸ್ಐಐಡಿಸಿಯ ಮೂಲಕ ಪಡೆದಿರುವ ಸಾಲ/ಎರವಲು ಸೌಲಭ್ಯದಿಂದ ಸೃಷ್ಟಿಸಲಾಗಿರುವ ಜಮೀನು, ಕಟ್ಟಡ ಮತ್ತು ಸ್ಥಾವರ & ಯಂತ್ರೋಪಕರಣಗಳು ಪ್ರಾಥಮಿಕ ಭದ್ರತೆಗಳಾಗಿರುತ್ತವೆ. ಇದು ಎರವಲುದಾರನ/ಸಾಲಗಾರನ ಯೋಜನೆ ಅಥವಾ ವ್ಯವಹಾರಕ್ಕೆ ನೇರವಾಗಿ ಸಂಬಂಧಿಸಿದ್ದು, ಎರವಲುಗಾರ/ಸಾಲಗಾರ ಮತ್ತು ಕೆಎಸ್ಐಐಡಿಸಿಯ ನಡುವೆ ನಿರ್ವಹಿಸಲ್ಪಟ್ಟಿರುವ ಸಾಲದ ಒಪ್ಪಂದ ಪತ್ರ ಮತ್ತಿತರ ದಾಖಲೆಪತ್ರಗಳಲ್ಲಿ ವಿವರಿಸಲಾಗಿರುವಂತೆ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೆಎಸ್ಐಐಡಿಸಿಗೆ ಅಡಮಾನ/ಒತ್ತೆ ಇಡತಕ್ಕದ್ದು.

33. **<u>ನಗದಾಗುವ ಮಾರಾಟ ಮೌಲ್ಯ:</u>** ಮಾರುಕಟ್ಟೆ ಮೌಲ್ಯದಲ್ಲಿ 10–15% ಕಳೆದ ನಂತರ ಬರುವ ಮೌಲ್ಯವೇ ನಗದಾಗುವ ಮಾರುಕಟ್ಟೆ ಮೌಲ್ಯವಾಗಿರುತ್ತದೆ.

34. **<u>ಜಾಮೀನುದಾರ</u>**: ಮತ್ತೊಬ್ಬ ವ್ಯಕ್ತಿಯ ಸಾಲದ ಅಥವಾ ನಡತೆಗೆ ಅಥವಾ ಬೇರೆಯವರು ಮಾಡುತ್ತಾರೆ ಎಂಬ ವಾಗ್ದಾನವಾಗಿ ನೀಡಲ್ಪಟ್ಟ ಹಣಕ್ಕೆ ಕಾನೂನಾತ್ಮಕವಾಗಿ ಜವಾಬ್ದಾರಿ ಒಪ್ಪಿಕೊಳ್ಳುವ ವ್ಯಕ್ತಿ.

35. **<u>ಮೂರನೇ ಪಾರ್ಟಿ ಮೇಲಾಧಾರ ಭದ್ರತೆ:</u>** 3ನೇ ಪಾರ್ಟಿ ಮಾಲೀಕನು ಕಂಪೆನಿಯ ಪ್ರವರ್ತಕ ಅಥವಾ ಪ್ರವರ್ತಕನ ಸಂಬಂಧಿ ಆಗಿರುವುದಿಲ್ಲ ಮತ್ತು ವ್ಯವಹಾರದ ಲಾಭಗಳು ಅಥವಾ ನಷ್ಟಗಳಲ್ಲಿ ಪಾಲು ಪಡೆಯುವುದಿಲ್ಲ ಅಥವಾ ಅವರು ಸಂಸ್ಥೆಯ ಆಡಳಿತದ ಭಾಗವಾಗಿರುವುದಿಲ್ಲ.

36. **<u>ನಗರ ಮತ್ತು ಅರೆ ನಗರ ಪ್ರದೇಶ</u>**: ಬಿಬಿಎಂಪಿ, ಬಿಎಂಆರ್‌ಡಿಎ, ಬಿಐಎಪಿಎ, ಎಲ್ಲಾ ನಗರ ನಿಗಮಗಳು, ಎಲ್ಲಾ ಜಿಲ್ಲಾ ಕೇಂದ್ರ ಸ್ಥಳ, ಎಲ್ಲಾ ಪಟ್ಟಣ ಪುರಸಭಾ ನಿಗಮಗಳ ಅಡಿಯಲ್ಲಿ ಬರುವ ಎಲ್ಲಾ ಪ್ರದೇಶಗಳು ಮತ್ತು ತಾಲ್ಲೂಕು ಕೇಂದ್ರ ಸ್ಥಳದ ಅಡಿಯಲ್ಲಿ ಬರುವ ಎಲ್ಲಾ ಪ್ರದೇಶಗಳು ನಗರ ಪ್ರದೇಶಗಳು. ಅಲ್ಲದೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊರಗಿನ ಸರಹದ್ದಿನಿಂದ 25 ಕಿಲೋ ಮೀಟರ್ ವ್ಯಾಪ್ತಿಯ ಒಳಗೆ ಬರುವ ಪ್ರದೇಶಗಳು ನಗರ ನಿಗಮಗಳ ಹೊರಗಿನ ಸರಹದ್ದಿನಿಂದ 10 ಕಿಮೀ ವ್ಯಾಪ್ತಿಯ ಒಳಗಿನ ಪ್ರದೇಶಗಳು ಮತ್ತು ನಗರ/ಪಟ್ಟಣ ಪುರಸಭಾ ಕೌನ್ಸಿಲ್‌ನ ಹೊರಗಿನ ಸರಹದ್ದಿನ 5 ಕಿಮೀ ವ್ಯಾಪ್ತಿಯ ಒಳಗೆ ಬರುವ ಪ್ರದೇಶಗಳನ್ನು ಅರೆ ನಗರ ಪ್ರದೇಶಗಳೆಂದು ಪರಿಗಣಿಸಲ್ಪಡುವುದು.

37. **<u>ಗ್ರಾಮೀಣ ಪ್ರದೇಶಗಳು:</u>** ಮೇಲೆ ಕ್ರಮ ಸಂಖ್ಯೆ 36ರಲ್ಲಿರುವುದನ್ನು ಹೊರತುಪಡಿಸಿ ಎಲ್ಲಾ ಪ್ರದೇಶಗಳು

38. **<u>ಮೌಲ್ಯಮಾಪನ</u>**: ಕೆಎಸ್ಐಐಡಿಸಿಯಿಂದ ಒಂದು ನಿರ್ಧಿಷ್ಟ ಉದ್ದೇಶಕ್ಕಾಗಿ ಆಸ್ತಿಯ ಮೌಲ್ಯವನ್ನು ರೂಪಿಸುವ ಮತ್ತು ನಿಷ್ಕರ್ಷಿಸುವ ಪ್ರಕ್ರಿಯೆ. ಮೌಲ್ಯಮಾಪನವನ್ನು ಅಂಗೀಕೃತ ಮೌಲ್ಯಮಾಪಕರಿಂದ ಅಥವಾ ಕೆಎಸ್ಐಐಡಿಸಿಯ ಸೂಕ್ತ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟವರಿಂದ ಮಾಡಿಸತಕ್ಕದ್ದು.

39. **<u>ವಾರಸುದಾರಿಕೆಯಿಂದ ಪಡೆದ ಆಸ್ತಿ:</u>** ತಂದೆ, ತಾಯಿಯಿಂದ ಅಥವಾ ಅಜ್ಜ, ಅಜ್ಜಿಯಿಂದ ಅಥವಾ ಕುಟುಂಬದ ಇತರೆ ಸದಸ್ಯರಿಂದ ಬಂದಿರುವ ಅಸ್ತಿ ಅಥವಾ ಇತರೆ ವಸ್ತುಗಳನ್ನು ವಾರಸುದಾರಿಕೆಯಿಂದ ಬಂದಿರುವ ಆಸ್ತಿಯೆಂದು ಕರೆಯಲ್ಪಡುವುದು. ಯಾರಾದರೂ ಮರಣ ಹೊಂದಿದಲ್ಲಿ ಹಣ ಅಥವಾ ಆಸ್ತಿಗಳು ವಾರಸ್ದಾರಿಕೆಯಂತೆ ಕಾನೂನಾತ್ಮಕವಾಗಿ ಅನುವಂಶಿಕವಾಗಿ ಬರಲಿದೆ.